ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್

ಶ್ರೀಮತಿ ಎನ್.ಎಸ್. ಲೀಲಾವತಿ ಹಾಗೂ ಇನ್ನೊಬ್ಬರು -ವಿರುದ್ಧ-ಶ್ರೀಮತಿ ಡಾ || ಆರ್. ಶಿಲ್ಪ ಬೃಂದಾ

ಕ್ರಿಮಿನಲ್ ಪುನರೀಕ್ಷಣ ಸಂಖ್ಯೆ: 1146/2019 ದಿನಾಂಕ: 11ನೇ ಡಿಸೆಂಬರ್, 2019

ಆದೇಶ

ನ್ಯಾಯಮೂರ್ತಿ ಶ್ರೀ ಬಿ.ಎ. ಪಾಟೀಲ್:

IV ನೇ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಟ್ರಾಫಿಕ್ ನ್ಯಾಯಾಲಯ, ಬೆಂಗಳೂರು-ಇದು, ಕ್ರಿಮಿನಲ್ ಸಂಕೀರ್ಣಸಂಖ್ಯೆ: 113/2018 ರಲ್ಲಿ ಅಪೀಲನ್ನು ವಜಾಗೊಳಿಸುವ ಮೂಲಕ ಸ್ಥಿರೀಕರಿಸಿ ಹೊರಡಿಸಿದದಿನಾಂಕ: 07.03.2019 ರ ಆದೇಶದ ಮೇರೆಗೆ, LX ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರು ಕ್ರಿಮಿನಲ್ ಅಪೀಲುಸಂಖ್ಯೆ: 615/2019 ರ ದಿನಾಂಕ:19.8.2019 ರಲ್ಲಿ ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಈ ಅರ್ಜಿಯನ್ನು 1 ನೇ ಮತ್ತು 2 ನೇ ಅರ್ಜಿದಾರರು ದಾಖಲಿಸಿರುವರು.

2. ಈ ಮೊಕದ್ದಮೆಯ ವಾಸ್ತವಿಕ ಸಂಕ್ಷಿಪ್ತ ಸಂಗತಿಗಳು ಹೀಗಿವೆ:- 1 ನೇ ಅರ್ಜಿದಾರಳು ಪ್ರತ್ಯರ್ಜಿದಾರಳ ತಾಯಿ ಆಗಿರುತ್ತಾಳೆ ಹಾಗೂ 2 ನೇ ಅರ್ಜಿದಾರನು ಪ್ರತ್ಯರ್ಜಿದಾರಳ ಸಹೋದರನು ಆಗಿರುತ್ತಾನೆ.ಪ್ರತ್ಯರ್ಜಿದಾರಳು ವೃತ್ತಿಯಲ್ಲಿ ವೈದ್ಯಳಾಗಿರುತ್ತಾಳೆ ಮತ್ತು ಅವಳ ವಿವಾಹವು 2002 ನೇ ವರ್ಷದಲ್ಲಿ ಶ್ರೀ ಮನೋಹರ್ ಅವರೊಂದಿಗೆ ಆಗಿದೆ. ತದನಂತರದಲ್ಲಿ ಅವಳ ವಾಸವು ಅವಳ ಅತ್ತೆಯ ಮನೆಯಾದ ದೆಹಲಿಯಲ್ಲಿ ಆಗಿರುತ್ತದೆ.ಪ್ರತ್ಯರ್ಜಿದಾರಳು ದೆಹಲಿಯಲ್ಲಿ ಕೆಲವು ತಿಂಗಳು ಇದ್ದು, ನಂತರದಲ್ಲಿ ತನ್ನ ಪ್ರಿಯಕರನಾದ ಡಾ || ಜುಬೇರ್ ಖಾನ್ನೊಂದಿಗೆ ಓಡಿಹೋಗಿರುತ್ತಾಳೆ ಹಾಗೂ ಶ್ರೀ ಮನೋಹನರ್ನೊಂದಿಗೆ ವಿವಾಹವು ವಿಚ್ಛೇದನೆಯ ಡಿಗ್ರಿಯ ಮೂಲಕ ಅಂತ್ಯಗೊಂಡಿರುತ್ತದೆ.ಆ ಕೂಡಲೇ ಪತ್ಯರ್ಜಿದಾರಳು ತನ್ನ ಹೆಸರನ್ನು ಆಯೇಷ ಜುಬೇರ್ ಎಂದು ಬದಲಾಯಿಸಿಕೊಂಡು, ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡಿರುತ್ತಾಳೆ.ಹಾಗೂ ಡಾ || ಜುಬೇರ್ ಖಾನ್ನೊಂದಿಗೆ ವಿವಾಹವಾಗಿ, ತನ್ನ ಗಂಡನ ಮನೆಯಲ್ಲಿ ಅವಳು ತನ್ನ ವೈವಾಹಿಕ ಬದುಕು ನಡೆಸುತ್ತಿರುತ್ತಾಳೆ.ತತ್ಪರಿಣಾಮವಾಗಿ, ಪ್ರತ್ಯರ್ಜಿದಾರಳು ಯುಎಇಗೆ ಹೋಗಿ ಅಲ್ಲಿಯೇ ಖಾಯಂ ಆಗಿ ನೆಲೆಸಿರುತ್ತಾಳೆ ಮತ್ತು ಆಕೆ ಎರಡು ಮಕ್ಕಳಿಗೆ ಜನ್ಮ ನೀಡಿರುತ್ತಾಳೆ.ಹೀಗಿರುವಾಗ, ಬೆಂಗಳೂರಿನ ಶೇಷಾದ್ರಿಪುರಂನಲ್ಲಿರುವ ನಂ .50 ಮತ್ತು 50/1 ಸಂಖ್ಯೆಯ ಸ್ವತ್ತಿನ ನಿರುಪಾಧಿಕ ಮಾಲೀಕತ್ವವನ್ನು 2 ನೇ ಅರ್ಜಿದಾರನ ಅಜ್ಜಿಯಾದ ಶ್ರೀಮತಿ ಸಾವಿತ್ರಮ್ಮ ಹೊಂದಿರುತ್ತಾರೆ.ಸದರಿ ಸ್ವತ್ತನ್ನು ಎರಡನೇ ಅರ್ಜಿದಾರನಿಗೆ ದಾನಪತ್ರದ ಮೂಲಕ ನೀಡಲಾಗಿರುತ್ತದೆ.ಪ್ರತ್ಯರ್ಜಿದಾರಳು 2018 ರ ಅಕ್ಟೋಬರ್ ಮೊದಲ ವಾರದಲ್ಲಿ ಅರ್ಜಿದಾರಳ ಮನೆಗೆ ಬಂದು ಸ್ವತ್ತಿನಲ್ಲಿ ಪಾಲು ನೀಡುವಂತೆ ಒತ್ತಾಯಿಸಿರುತ್ತಾಳೆ.ಅವಳ ಬೇಡಿಕೆಯನ್ನು ಅರ್ಜಿದಾರಳು ನಿರಾಕರಿಸಿದಾಗ, ಅವಳು ಜಗಳಕ್ಕೆ ಇಳಿದು, ಜಗಳವು ಅತಿರೇಕಕ್ಕೆ ಹೋಗಿ ಅವಳು ತನ್ನ ತಾಯಿ ಹಾಗೂ ಸಹೋದರನಾದ 2 ನೇ ಅರ್ಜಿದಾರನಿಗೆ ಗಾಯ ಉಂಟು ಮಾಡುವ ಮಟ್ಟಕ್ಕೆ ಹೋಯಿತು.

ತತ್ಪರಿಣಾಮವಾಗಿ, ಪ್ರತ್ಯರ್ಜಿದಾರಳ 140 ಶ್ರೀಮತಿ ಎನ್.ಎಸ್. ಲೀಲಾವತಿ ಹಾಗೂ ಇನ್ನೊಬ್ಬರು ವಿರುದ್ಧ-ಶ್ರೀಮತಿ ಡಾ || ಆರ್. ಶಿಲ್ಪ ಬೃಂದಾ ವಿರುದ್ಧ ದೂರನ್ನು ಸಹ ಅಪರಾಧಸಂಖ್ಯೆ: 106/2018 ರಲ್ಲಿ ನೋಂದಾಯಿಸ ಲಾಗಿರುತ್ತದೆ.ಇದಕ್ಕೆ ಪ್ರತಿಯಾಗಿ, ಪ್ರತ್ಯರ್ಜಿದಾರಳು ಸಹ ಅರ್ಜಿದಾರರಿಬ್ಬರ ವಿರುದ್ಧ ಹಾಗೂ ಎರಡನೇ ಅರ್ಜಿದಾರನ ಪತ್ನಿಯ ವಿರುದ್ಧ ಅಧಿಕಾರ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತಾಳೆ.ಪ್ರತ್ಯರ್ಜಿದಾರಳು ತನ್ನ ದೂರನ್ನು ಅಪರಾಧಸಂಖ್ಯೆ: 105/2018 ರಲ್ಲಿ ನೋಂದಾಯಿಸಿರುತ್ತಾಳೆ.ಅವಳು ತನ್ನ ದೂರನ್ನು ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ಗೃಹ ಸಂಬಂಧೀ ಹಿಂಸೆ ಅಧಿನಿಯಮ ಎಂದು ಉಲ್ಲೇಖಿಸಲಾಗಿದೆ) 12 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿರುತ್ತಾಳೆ.ನೋಟೀಸನ್ನು ಜಾರಿ ಮಾಡಿದ ನಂತರ ಅಂಥ ದೂರಿನ ಸಮರ್ಥನೀಯತೆಗೆ ಸಂಬಂಧಿಸಿದಂತೆ ಅರ್ಜಿದಾರರು ಅರ್ಜಿಯನ್ನು ದಾಖಲಿಸಿದರು.ಸದರಿ

ಅರ್ಜಿಯನ್ನು ಅಧಿವಿಚಾರಣಾ ನ್ಯಾಯಾಲಯ ವಜಾಗೊಳಿಸಿತು.ಅಪೀಲು ನ್ಯಾಯಾಲಯವು ಅದನ್ನು ಸ್ಥಿರೀಕರಿಸಿರುತ್ತದೆ.ಅದನ್ನು ಪ್ರಶ್ನಿಸಿ ಅರ್ಜಿದಾರರು ಈ ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

3. ಅರ್ಜಿದಾರರ ಮತ್ತು ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಂಡಿಸಿದ ನಿವೇದನೆಗಳನ್ನು ನಾನು ಆಲಿಸಿರುತ್ತೇನೆ.

4. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ನಿವೇದಿಸಿದ ಪ್ರಮುಖ ವಾದವೇನೆಂದರೆ, ದೂರುದಾರಳು, ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ 2 ( ಎ) ಪ್ರಕರಣದ ಅಡಿಯಲ್ಲಿ ಪರಿಭಾಷಿಸಿದಂತಹ ಬಾಧಿತ ವ್ಯಕ್ತಿಯಾಗಿರುವುದಿಲ್ಲ.ಅಲ್ಲದೆ, ಅರ್ಜಿದಾರರ ವಿರುದ್ಧವಾಗಿ ನೀಡಲಾದ ಅರ್ಜಿಯು, ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ 12 ನೇ ಪ್ರಕರಣದ ಅಡಿಯಲ್ಲಿ ಸಮರ್ಥನೀಯವಾಗಿಲ್ಲ.ಅರ್ಜಿಯನ್ನು ಸಮರ್ಥಿಸಬೇಕಾದರೆ, ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ 2 (ಎಫ್) ಪ್ರಕರಣದ ಅಡಿಯಲ್ಲಿ ಹೇಳಲಾದಂತ ಗೃಹ ಸಂಬಂಧವನ್ನು ಅರ್ಜಿದಾರರು ಹೊಂದಿರಬೇಕು.ಮುಂದುವರೆಸುತ್ತಾ, ಪ್ರತ್ಯರ್ಜಿದಾರ-ದೂರುದಾರಳು ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ವಾಸಿಸುತ್ತಿರುವುದಿಲ್ಲ.ಈ ಎಲ್ಲ ಪರಿಭಾಷೆಗಳನ್ನು ಮೊಕದ್ದಮೆಯ ವಾಸ್ತವಿಕ ಸಂಗತಿಗಳಿಗೆ ಸಂಬಂಧಿಸಿದಂತೆ ಒಟ್ಟಿಗೆ ಓದಿಕೊಂಡಾಗ ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ 12 ನೇ ಪ್ರಕರಣದ ಅಡಿಯಲ್ಲಿ ಯಾವುದೇ ದೂರನ್ನು ಪುರಸ್ಕರಿಸಲು ಸಾಧ್ಯವಿಲ್ಲವೆಂದು ನಿವೇದಿಸಿರುವರು.ಮುಂದುವರೆದು, ಪ್ರತ್ಯರ್ಜಿದಾರಳು 2002 ರಲ್ಲಿ ವಿವಾಹವಾಗಿರುತ್ತಾಳೆ ಮತ್ತು ನಂತರದಲ್ಲಿ ಮೊದಲ ಪತಿಯಿಂದ ವಿಚ್ಛೇದನೆ ಪಡೆದುಕೊಂಡಿರುತ್ತಾಳೆ ಹಾಗೂ ತನ್ನ ಧರ್ಮಕ್ಕೆ ಸೇರಿರದ ವ್ಯಕ್ತಿಯೊಂದಿಗೆ ಆಕೆ ವಿವಾಹವಾಗಿರುತ್ತಾಳೆ.ತದನಂತರದಲ್ಲಿ ಖಾಯಂ ಆಗಿ ದುಬೈನಲ್ಲಿ ವಾಸಿಸುತ್ತಿರುತ್ತಾಳೆ.ಹೀಗಿರುವಾಗ ಸ್ವತ್ತಿನಲ್ಲಿ ಪಾಲನ್ನು ಕೇಮು ಮಾಡಿ ತನ್ನ ಪಾಲಿನ ಸ್ವತ್ತಿಗಾಗಿ ದಾವೆಯನ್ನು ಹೂಡಿರುತ್ತಾಳೆ ಮತ್ತು ಹಾಗೆಯೇ ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ ಅಡಿಯಲ್ಲಿ ತಂದೆ ತಾಯಿಯರ ವಾಸದ ಮನೆಯಲ್ಲಿ ಅವಳು ಆಶ್ರಯವನ್ನು ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಅವಳು ವಿಚ್ಛೇದಿತೆಯಾಗಿರುವುದಿಲ್ಲ ಎಂದು ನಿವೇದಿಸಿರುವರು.ಅಧಿವಿಚಾರಣಾ ನ್ಯಾಯಾಲಯ ಮತ್ತು ಅಪೀಲು ನ್ಯಾಯಾಲಯಗಳು ಸದರಿ ವಾಸ್ತವಿಕ ಸಂಗತಿಯನ್ನು ಮತ್ತು ಕಾನೂನು ಪ್ರಸ್ತಾವಗಳನ್ನು ಪರಿಗಣಿಸದೆ ತಪ್ಪು ನಿರ್ಣಯಕ್ಕೆ ಬಂದು ಅರ್ಜಿಯನ್ನು ತಪ್ಪಾಗಿಯೇ ವಜಾಗೊಳಿಸಿವೆ.ಪ್ರತ್ಯರ್ಜಿದಾರಳು ಹೂಡಿದ ಅರ್ಜಿಯಲ್ಲಿ ಕಾನೂನು ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಂಡಿರುವುದನ್ನು ಬಿಟ್ಟರೆ ಬೇರೇನೂ ಇಲ್ಲ. ಮುಂದುವರೆದು, ಪ್ರತ್ಯರ್ಜಿದಾರಳಾದ ಮಗಳು ಒಮ್ಮೆ ಸಾಮೂಹಿಕ ಕುಟುಂಬ ವಾಸದ ಮನೆಯಿಂದ ಹೊರ ಹೋಗಿ ತನ್ನ ಗಂಡನೊಂದಿಗೆ ತನ್ನದೇ ಸ್ವಂತ ವಾಸದ ಮನೆಯಲ್ಲಿ ನೆಲೆ ನಿಂತರೆ ಅಲ್ಲಿಗೆ ಅವಳ ತವರಿನ ಗೃಹ ಸಂಬಂಧೀ ಸಂಬಂಧವು ಕೊನೆಗೊಳ್ಳುತ್ತದೆಂದು ವಾದಿಸಿದ್ದಾರೆ.ಸದರಿ ವಾದಾಂಶವನ್ನು ಪುಷ್ಟೀಕರಿಸುವುದಕ್ಕಾಗಿ ಅವರು ವರದಿಯಾಗಿರುವ ವಿಜಯ ವರ್ಮ - ವಿರುದ್ಧ ದೆಹಲಿ ಸರ್ಕಾರ (ಎನ್‌ಸಿಟಿ) ಮತ್ತು ಇನ್ನೊಬ್ಬರು 1 ' ಮೊಕದ್ದಮೆಯ ನಿರ್ಣಯವನ್ನು ಅವಲಂಬನೆಯಾಗಿ ತೆಗೆದುಕೊಳ್ಳಲಾಗಿದೆ.

1. ಎಐಆರ್ 2011 (ಎನ್‌ಒಸಿ) 171 (ದೆಹಲಿ)

2 ನೇ ಅರ್ಜಿದಾರ ಮತ್ತು ಪ್ರತ್ಯರ್ಜಿದಾರಳು ಒಡಹುಟ್ಟಿದ ಸಹೋದರ ಮತ್ತು ಸಹೋದರಿಯಾಗಿರುವರು ಮತ್ತು ಪ್ರತ್ಯರ್ಜಿದಾರಳು ಸ್ವತ್ತಿನ ಪಾಲಿಗಾಗಿ ದಾವೆಯನ್ನು ಹೂಡಿರುವಳು.ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ ಅಡಿಯಲ್ಲಿ ದೂರನ್ನು ದಾಖಲಿಸಬೇಕಾದರೆ ಕುಟುಂಬದಲ್ಲಿ ಸ್ವತ್ತು ವಿಭಜನೆ ಆಗಿರಬಾರದು.ಗೃಹ ಸಂಬಂಧೀ ಹಿಂಸೆ ಅಧಿನಿಯಮದ ಉಪಬಂಧಗಳನ್ನು ಕ್ರಮವಾಗಿ ಅನ್ವಯಿಸುವುದಕ್ಕಾಗಿ ಮಗಳಾಗಿರುವ ಪ್ರತ್ಯರ್ಜಿದಾರಳು ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿಯೇ ಅವರೊಟ್ಟಿಗೆ ವಾಸಿಸುತ್ತಿರಬೇಕು.ಗೃಹ ಸಂಬಂಧಿ ಹಿಂಸೆ ಅಧಿನಿಯಮದ ಉಪಬಂಧಗಳನ್ನು ಅನ್ವಯಿಸಬೇಕಾದರೆ ಅವಳು ನಿರಂತರವಾಗಿ ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ವಾಸಿಸುತ್ತಿರಬೇಕು.ತನ್ನ ಈ ವಾದಾಂಶಗಳನ್ನು ಪುಷ್ಟೀಕರಿಸುವ ಸಲುವಾಗಿ, ಅವರು ರಾಜ್ಕಿಶೋರ್ ಶುಕ್ಲ – ವಿರುದ್ಧ-ಆಶಾ ಶುಕ್ಲ [2] 2 ಮೊಕದ್ದಮೆಯಲ್ಲಿದಿನಾಂಕ: 22.09.2015 ರಂದು ವಿಲೆ ಮಾಡಲಾದ ಮಧ್ಯಪ್ರದೇಶ ಉಚ್ಚ ನ್ಯಾಯಾಲಯದ ನಿರ್ಣಯವನ್ನು ಚ ಅವಲಂಬನೆಯಾಗಿ ನೀಡಿರುವರು.ತಮ್ಮ ನಿವೇದನೆಯನ್ನು

ಮುಂದುವರೆಸಿ, ಪ್ರತ್ಯರ್ಜಿದಾರಳು ಪ್ರತ್ಯೇಕವಾಗಿ ವಾಸಿಸುತ್ತಿದ್ದ ಪಕ್ಷದಲ್ಲಿ, ಅಂಥ ಸನ್ನಿವೇಶಗಳಲ್ಲಿ ಅರ್ಜಿದಾರ ಮತ್ತು ಪ್ರತ್ಯರ್ಜಿದಾರರ ನಡುವೆ ಗೃಹ ಸಂಬಂಧಿಯಂತಹ ಯಾವುದೇ ಸಂಬಂಧಗಳು ಇರುವುದಿಲ್ಲ.ಈ ಸಂಬಂಧದಲ್ಲಿ ನ್ಯಾಯವಾದಿಗಳು ತಮ್ಮ ವಾದಾಂಶಕ್ಕೆ ಅನಿತಾ ಕೋಂ ಆನಂದ್ ತಂಬೆ -ವಿರುದ್ದ-ಶ್ರೀ ಆನಂದ ಬಿನ್ ಏಕನಾಥ್ ತಂಬೆ ಯವರ ಮೊಕದ್ದಮೆಯಲ್ಲಿನ ಬಾಂಬೆ ಉಚ್ಚ ನ್ಯಾಯಾಲಯವು ನೀಡಿದ ನಿರ್ಣಯವನ್ನು ಅವಲಂಬನೆಯಾಗಿ ನೀಡಿರುವರು.ತಮ್ಮ ವಾದಾಂಶವನ್ನು ಮುಂದುವರೆಸಿ, ಈ ಸಂಬಂಧದಲ್ಲಿ ಬಾಧಿತ ವ್ಯಕ್ತಿಯು ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ ಅಡಿಯಲ್ಲಿ ರಕ್ಷಣೆ ಕೋರಲು ಸಾಧ್ಯವಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಅವಳು ಕುಟುಂಬದ ಮಹಿಳಾ ಸದಸ್ಯಳಾಗಿದ್ದರೂ, ಗೃಹ ಸಂಬಂಧಿ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮದ ಇತರ ಉಪಬಂಧಗಳನ್ನು ಅವಳು ಪಾಲಿಸಿದಾಗ ಮಾತ್ರವೇ ಹಕ್ಕುಳ್ಳವಳಾಗಿರುತ್ತಾಳೆ. ತಮ್ಮ ಈ ವಾದಾಂಶಕ್ಕೆ ಪುಷ್ಟಿಕರಿಸಲು ಹಿರಾಲ್ ಪಿ. ಹರ್ಸೊರ ಮತ್ತು ಇತರರು -ವಿರುದ್ದ-ಕುಸುಮ್ ನರೋತ್ತಮದಾಸ್ ಹರ್ರ್ ಮತ್ತು ಇತರರು ಮೊಕದ್ದಮೆಯಲ್ಲಿನ ನಿರ್ಣಯವನ್ನು ಮತ್ತು ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯವು ಯಡ್ಡಪಳ್ಳಿ ಮೇರಿ ಮಣಿ -ವಿರುದ್ದ-ಆಂಧ್ರ ಪ್ರದೇಶ ಸರ್ಕಾರ 5* ಮೊಕದ್ದಮೆಯಲ್ಲಿ ನೀಡಿದ ನಿರ್ಣಯವನ್ನು ಸಹ ಇಲ್ಲಿ ಅವಲಂಬಿಸಿರುತ್ತಾರೆ.ಈ ಎಲ್ಲ ಕಾರಣಗಳ ಆಧಾರದ ಮೇಲೆ ಈ ಅಪೀಲು ಅರ್ಜಿಯನ್ನು ಪುರಸ್ಕರಿಸುವುದಕ್ಕೆ ಮತ್ತು ಪ್ರಶ್ನಿತ ಆದೇಶವನ್ನು ವಜಾಗೊಳಿಸುವುದಕ್ಕೆ ಕೋರಿರುತ್ತಾರೆ.

5. ಇದಕ್ಕೆ ವಿರುದ್ದವಾಗಿ, ಪ್ರತ್ಯರ್ಜಿದಾರಳ ಪರವಾಗಿ ಮಾನ್ಯ ನ್ಯಾಯವಾದಿಗಳು ತುಂಬಾ ಬಲವಾಗಿ ವಾದಿಸುತ್ತಾ, ಪ್ರತ್ಯರ್ಜಿದಾರಳು ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ 18, 19 ಮತ್ತು 22 ನೇ ಪ್ರಕರಣದ ಅಡಿಯಲ್ಲಿ ಪರಿಹಾರವನ್ನು ಕೋರಿದ್ದಾಳೆಂದು ನಿವೇದಿಸಿಕೊಂಡಿದ್ದಾರೆ.ಪ್ರತ್ಯರ್ಜಿದಾರಳು ದುಬೈನಿಂದ ನಾಲ್ಕು ತಿಂಗಳ ಹಿಂದೆ ಇಲ್ಲಿಗೆ ಆಗಮಿಸಿದ್ದಳು ಮತ್ತು ಅವಳು ಸದರಿ ಆವರಣದಲ್ಲಿ ನಾಲ್ಕು ತಿಂಗಳಿನಿಂದ ವಾಸವಾಗಿರುತ್ತಾಳೆ ಎಂದು ನಿವೇದಿಸಿರುತ್ತಾರೆ.ಮುಂದುವರೆಸುತ್ತಾ, ಸಮರ್ಥನೀಯತೆಯನ್ನು ನಿರ್ಣಯಿಸಲು ಸಾಧ್ಯವಿಲ್ಲ.ಸಾಕ್ಷ್ಯಾಧಾರವನ್ನು ಪರಿಶೀಲಿಸಿದ ನಂತರದಲ್ಲಿ ಮಾತ್ರವೇ ಅದನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ ಎಂದು ನಿವೇದಿಸಿಕೊಂಡಿರುತ್ತಾರೆ.ಮುಂದುವರೆದ ನಿವೇದನೆಯಲ್ಲಿ ಅವರು, ಅರ್ಜಿದಾರರು ಪ್ರತ್ಯರ್ಜಿದಾರಳ ಮೇಲೆ ಹಲ್ಲೆ ಮಾಡಿರುವರು ಮತ್ತು ಮನೆಯನ್ನು ಪ್ರವೇಶಿಸಲು ಅವಕಾಶ ಮಾಡಿಕೊಟ್ಟಿರುವುದಿಲ್ಲ.ಈ ಕಾರಣದಿಂದ ಸದರಿ ಮನೆಯಲ್ಲಿ ಅವಳು ವಾಸವಾಗಿರುವುದಿಲ್ಲ.ಮುಂದುವರೆಸುತ್ತಾ, ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಉಲ್ಲೇಖಿಸಿದ ನಿರ್ಣಯಗಳು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವುದಿಲ್ಲ ಎಂದು ನಿವೇದಿಸಿರುತ್ತಾರೆ.ಉಭಯ ಪಕ್ಷಕಾರರು ಒಂದೇ ವಾಸದ ಮನೆಯಲ್ಲಿ ಅವಿಭಕ್ತ ಕುಟುಂಬವಾಗಿ ಅಥವಾ ಸಾಮೂಹಿಕ ವಾಸದ ಮನೆಯಲ್ಲಿ ವಾಸಿಸುತ್ತಿರುವಾಗ, ಅಂಥ ಸನ್ನಿವೇಶಗಳಲ್ಲಿ, ಪ್ರತ್ಯರ್ಜಿದಾರರ ಹಕ್ಕು ಸ್ವಾಮ್ಯವನ್ನು ಪರಿಗಣಿಸದೆ ಪರಿಮಿತ ವ್ಯಾಖ್ಯಾನವನ್ನು ನೀಡಲು ಸಾಧ್ಯವಿಲ್ಲ.ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ 19 ( 1) ( ಎ) ಪ್ರಕರಣದ ಅಡಿಯಲ್ಲಿ ಸಂರಕ್ಷಣಾ ಆದೇಶವನ್ನು ಮಾಡಬೇಕಾಗುತ್ತದೆ.ನ್ಯಾಯವಾದಿಯು ತನ್ನ ವಾದವನ್ನು ಸಮರ್ಥಿಸುವ ಸಲುವಾಗಿ ಶ್ರೀಮತಿ ಪ್ರೀತಿ ಸತಿಜ ವಿರುದ್ದ ಶ್ರೀಮತಿ ರಾಜ್ಕುಮಾರಿ ಮತ್ತು ಇನ್ನೊಬ್ಬರು 6* ಮೊಕದ್ದಮೆಯ ನಿರ್ಣಯವನ್ನು ಅವಲಂಬನೆಯಾಗಿ ಉಲ್ಲೇಖಿಸಿರುವರು.ತಮ್ಮ ಮುಂದುವರೆದ ನಿವೇದನೆಯಲ್ಲಿ, ಸಂಬಂಧವನ್ನು ನಿರಾಕರಿಸಿಲ್ಲವೆಂದು ಹೇಳುತ್ತಾ, ಅಂಥ ಸನ್ನಿವೇಶಗಳ ಅಡಿಯಲ್ಲಿ, ನ್ಯಾಯಾಲಯವು ಈ ಹಂತದಲ್ಲಿ ಹಕ್ಕುಗಳನ್ನು ಪ್ರಸ್ತುತದಲ್ಲಿ ನ್ಯಾಯ ನಿರ್ಣಯಿಸಲು ಸಾಧ್ಯವಿಲ್ಲ.ಕಾನೂನಿನ ಉದ್ದೇಶವನ್ನು ಗಮನಕ್ಕೆ ತೆಗೆದುಕೊಂಡ ಸಂದರ್ಭದಲ್ಲಿ ಮತ್ತು ಮಹಿಳೆಯು ಗೃಹ ಸಂಬಂಧಿ ಸಂಬಂಧವನ್ನು ಹೊಂದಿದ್ದಾರೆ ಮತ್ತು ರಕ್ತ ಸಂಬಂಧ, ವಿವಾಹ 0 0 ಅಥವಾ ಅವಿಭಕ್ತ ಕುಟುಂಬದಲ್ಲಿನ ಸಂಬಂಧ ಮುಖಾಂತರವಾಗಿ ಸಾಮೂಹಿಕ ವಾಸದ ಮನೆಯಲ್ಲಿ ಅವರೊಂದಿಗೆ ಯಾವುದೇ ಸಮಯದಲ್ಲಿ ವಾಸಿಸುತ್ತಿದ್ದರೆ ಮತ್ತು ಈ ಸಂದರ್ಭದಲ್ಲಿ ಯಾವುದೇ ಗೃಹ ಸಂಬಂಧೀ ಹಿಂಸೆ ನಡೆದ ಪಕ್ಷದಲ್ಲಿ ನ್ಯಾಯಾಲಯ ಪರಿಹಾರವನ್ನು ನೀಡುತ್ತದೆ.ಇದಕ್ಕೆ ಪೂರಕವಾಗಿ ಅವರು ಕುಸುಮ್ ಲತಾ ಶರ್ಮ – ವಿರುದ್ದ ರಾಜ್ಯ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿ ದೆಹಲಿ ಉಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬನೆಯಾಗಿ ನೀಡಿರುವರು.ತಮ್ಮ ಚ ಮುಂದುವರೆದ ನಿವೇದನೆಯಲ್ಲಿ, ಪ್ರತ್ಯರ್ಜಿದಾರಳು ಬಾಡಿಗೆ ಒಪ್ಪಂದವನ್ನು ಮಾಡಿಕೊಂಡಿದ್ದಾಳೆ ಮತ್ತು ಇದರಿಂದ ಅವಳು ಸ್ವಂತ ನಿವಾಸದ ಮನೆಯನ್ನು

ಹೊಂದಿರುವುದಿಲ್ಲ.ಈ ಸನ್ನಿವೇಶದಲ್ಲಿ ನಿವಾಸ ಆದೇಶವನ್ನು ಹೊರಡಿಸಬೇಕಾಗಿದೆ.ಈ ಎಲ್ಲಾ ಕಾರಣಗಳಿಂದ ಅರ್ಜಿಯನ್ನು ವಜಾಮಾಡಬೇಕೆಂದು ನ್ಯಾಯವಾದಿಗಳು ಪ್ರಾರ್ಥಿಸಿರುವರು.

6. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಂಡಿಸಿದ ನಿವೇದನೆಗಳನ್ನು ನಾನು ಬಹಳ ಎಚ್ಚರಿಕೆಯಿಂದ ಮತ್ತು ತುಂಬಾ ಜಾಗರೂಕತೆಯಿಂದ ಆಲಿಸಿರುತ್ತೇನೆ ಮತ್ತು ದಾಖಲೆಗಳನ್ನು ಪರಿಶೀಲಿಸಿರುತ್ತೇನೆ.

6. ಎಐಆರ್ 2014 ದೆಹಲಿ 46

7. 2011 ಎಸ್ಸಿ ಆನ್ಲೈನ್ ದೆಹಲಿ 3710

7. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳ ಅಹವಾಲನ್ನು ಆಲಿಸಿದ ತರುವಾಯ, ಪ್ರತ್ಯರ್ಜಿದಾರಳಿಗೆ 1 ನೇ ಅರ್ಜಿದಾರಳು ತಾಯಿ, 2 ನೇ ಅರ್ಜಿದಾರನು ಸಹೋದರ ಎಂಬ ವಿಷಯವು ವಿವಾದವಾಗಿರುವುದಿಲ್ಲ.ಪ್ರತ್ಯರ್ಜಿದಾರಳು 2002 ನೇ ವರ್ಷದಲ್ಲಿ ವಿವಾಹವಾಗಿದ್ದು, ತರುವಾಯ ಅವಳು ವಿಚ್ಛೇದನ ಪಡೆದುಕೊಂಡಳೆಂದು ಮತ್ತು ತದನಂತರದಲ್ಲಿ ಡಾ || ಜುಬೇರ್ ಖಾನ್ ಅವರನ್ನು ವಿವಾಹವಾಗಿ ದುಬೈಯಲ್ಲಿ ವಾಸಿಸಲಾರಂಭಿಸಿದಳೆಂಬ ಅಂಶಗಳಲ್ಲಿ ಯಾವುದೇ ತಕರಾರು ಇರುವುದಿಲ್ಲ.

8. ಈ ನ್ಯಾಯಾಲಯವು ಪರಿಗಣಿಸಬೇಕಾದ ಮೊದಲ ಪ್ರಶ್ನೆ ಯಾವುದೆಂದರೆ ಅರ್ಜಿದಾರರು ಮತ್ತು ಪ್ರತ್ಯರ್ಜಿದಾರಳ ನಡುವೆ ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮದ 2 (ಎಫ್) ಪ್ರಕರಣದ ಅಡಿಯಲ್ಲಿ ಹೇಳಲಾದಂಥ ಗೃಹ ಸಂಬಂಧಿ ಬಾಂಧವ್ಯವನ್ನು ಹೊಂದಿದೆಯೇ ಮತ್ತು ಅರ್ಜಿದಾರರ ಮತ್ತು ಪ್ರತ್ಯರ್ಜಿದಾರಳ ನಡುವೆ ಸಾಮೂಹಿಕ ವಾಸದ ಮನೆಯ ವ್ಯಾಪ್ತಿ ಇದೆಯೇ ಎಂಬುದಾಗಿದೆ.ಸಂಕ್ಷಿಪ್ತತೆಯ ಉದ್ದೇಶಕ್ಕಾಗಿ ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ 2 (ಎಫ್) ಮತ್ತು (ಎಸ್) ಪ್ರಕರಣವನ್ನು ಉದ್ಧರಿಸಿದ್ದು, ಅದನ್ನು ಈ ಕೆಳಗಿನಂತೆ ಓದಿಕೊಳ್ಳಲಾಗಿದೆ:

"2 (ಎಫ್) " ಗೃಹ ಸಂಬಂಧ " ಎಂದರೆ ರಕ್ತಸಂಬಂಧದ ಮೂಲಕ, ವಿವಾಹದ ಮೂಲಕ ಅಥವಾ ವಿವಾಹದ, ದತ್ತಕದ ಸ್ವರೂಪದಲ್ಲಿನ ಸಂಬಂಧದ ಮೂಲಕ ಅಥವಾ ಅವಿಭಕ್ತ ಕುಟುಂಬದ ಸದಸ್ಯರಾಗಿ ಒಟ್ಟಿಗೆ ವಾಸಿಸುವ ಕುಟುಂಬದ ಸದಸ್ಯರಾಗಿರುವಾಗ, ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಒಟ್ಟಿಗೆ ವಾಸಿಸುತ್ತಿರುವ ಅಥವಾ ಯಾವುದೇ ನಿರ್ದಿಷ್ಟ ಕಾಲದಲ್ಲಿ ಒಟ್ಟಿಗೆ ವಾಸಿಸುತ್ತಿದ್ದ ಇಬ್ಬರು ವ್ಯಕ್ತಿಗಳ ನಡುವಿನ ಸಂಬಂಧ ಎಂದು ಅರ್ಥ; 2 (ಎಸ್) " ಸಾಮೂಹಿಕ ಕುಟುಂಬ ವಾಸದ ಮನೆ " ಎ 0 ದರೆ, ಬಾಧಿತ ವ್ಯಕ್ತಿಯು ಒಂಟಿಯಾಗಿ ಆಗಲಿ ಅಥವಾ ಎದುರುದಾರನ ಜೊತೆಯಲ್ಲಿ ಆಗಲಿ ಗೃಹ ಸಂಬಂಧದಲ್ಲಿ ವಾಸಿಸುತ್ತಿರುವ ಅಥವಾ ಯಾವುದೇ ಕಾಲದಲ್ಲಿ ವಾಸಿಸುತ್ತಿದ್ದ ಮನೆ ಎಂದು ಅರ್ಥ ಮತ್ತು ಬಾಧಿತ ವ್ಯಕ್ತಿಯು ಅಥವಾ ಎದುರುದಾರನು ಜಂಟಿಯಾಗಿ ಒಡೆತನ ಹೊಂದಿರುವ ಅಥವಾ ಬಾಡಿಗೆಗೆ ಪಡೆದಿರುವ ಅಥವಾ ಅವರಿಬ್ಬರಲ್ಲಿ ಒಬ್ಬರು ಒಡೆತನ ಹೊಂದಿರುವ ಅಥವಾ ಬಾಡಿಗೆಗೆ ಪಡೆದಿರುವ ಅದಕ್ಕೆ ಸಂಬಂಧಿಸಿದಂತೆ ಬಾಧಿತ ವ್ಯಕ್ತಿಯು ಅಥವಾ ಎದುರುದಾರನು ಅಥವಾ ಅವರಿಬ್ಬರೂ ಜಂಟಿಯಾಗಿ ಅಥವಾ ಒಂಟಿಯಾಗಿ ಯಾವುದೇ ಹಕ್ಕನ್ನು, ಸ್ವಾಮ್ಯವನ್ನು, ಹಿತಾಸಕ್ತಿಯನ್ನು ಅಥವಾ ಈಕ್ವಿಟಿಯನ್ನು ಹೊಂದಿರುವಂಥ ವಾಸದ ಮನೆಯನ್ನು ಒಳಗೊಳ್ಳುತ್ತದೆ ಮತ್ತು ವಾಸದ ಮನೆಯಲ್ಲಿ ಎದುರುದಾರನು ಅಥವಾ ಬಾಧಿತ ವ್ಯಕ್ತಿಯು ಯಾವುದೇ ಹಕ್ಕನ್ನು, ಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರಲಿ ಅಥವಾ ಇಲ್ಲದಿರಲಿ ಎದುರುದಾರನು ಸದಸ್ಯನಾಗಿರುವ ಅವಿಭಕ್ತ ಕುಟುಂಬಕ್ಕೆ ಸೇರಿರಬಹುದಾದಂಥ ವಾಸದ ಮನೆಯನ್ನು ಒಳಗೊಳ್ಳುತ್ತದೆ.

9. ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮದ IV ನೇ ಅಧ್ಯಾಯವು ಪರಿಹಾರಗಳ ಆದೇಶಗಳನ್ನು ಪಡೆಯುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನು ವ್ಯವಹರಿಸುತ್ತದೆ.12 ನೇ ಪ್ರಕರಣವು, ಬಾಧಿತ ವ್ಯಕ್ತಿಯು ಅಥವಾ ಸಂರಕ್ಷಣಾ ಅಧಿಕಾರಿ ಅಥವಾ ಬಾಧಿತ ವ್ಯಕ್ತಿಯ ಪರವಾಗಿ ಇತರ ಯಾರೇ ವ್ಯಕ್ತಿಯು ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮದ 17 ರಿಂದ 22 ನೇ ಪ್ರಕರಣದಲ್ಲಿ ಉಪಬಂಧಿಸಿದಂತೆ ಒಂದು ಅಥವಾ ಅದಕ್ಕಿಂತ ಹೆಚ್ಚು ಪರಿಹಾರವನ್ನು ಕೋರಿ ಮ್ಯಾಜಿಸ್ಟ್ರೇಟರಿಗೆ ಅರ್ಜಿಯನ್ನು ಸಲ್ಲಿಸಲು ಅವಕಾಶ ಚ ಕಲ್ಪಿಸುತ್ತದೆ.ಸದರಿ ಉಪಬಂಧಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳು ನಿಯಂತ್ರಿಸುತ್ತವೆ.

10. ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮದ 2 ( ಎ) ಪ್ರಕರಣದಲ್ಲಿ ಬಾಧಿತ ವ್ಯಕ್ತಿಯ ಬಗ್ಗೆ ಪರಿಭಾಷಿಸಲಾಗಿದೆ.ಬಾಧಿತ ವ್ಯಕ್ತಿ ಎಂದರೆ, ಎದುರುದಾರನೊಂದಿಗೆ ಕೌಟುಂಬಿಕ ಸಂಬಂಧ ಹೊಂದಿರುವ ಮತ್ತು ಪ್ರತ್ಯರ್ಜಿದಾರನಿಂದ ಗೃಹ ಸಂಬಂಧೀ ಹಿಂಸೆಯ ಯಾವುದೇ ಕೃತ್ಯಕ್ಕೆ ಒಳಗಾಗಿರುವವರೆಂದು ಆರೋಪಿಸಲಾದ ಯಾರೇ ಮಹಿಳೆ ಎಂದರ್ಥ.

11. ಸದರಿ ಪರಿಭಾಷೆಯನ್ನು ಪರಾಮರ್ಶಿಸಿದಾಗ, ಎದುರುದಾರನೊಂದಿಗೆ ಈ ಹಿಂದೆ ಅಥವಾ ಪ್ರಸ್ತುತದಲ್ಲಿ ಕೌಟುಂಬಿಕ ಸಂಬಂಧ ಹೊಂದಿರುವ ಮತ್ತು ಎದುರುದಾರನಿಂದ ಗೃಹ ಸಂಬಂಧೀ ಹಿಂಸೆಗೆ ಒಳಗಾಗಿರುವ ಮಹಿಳೆ ಮಾತ್ರ ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮದ IV ನೇ ಅಧ್ಯಾಯದ ಅಡಿಯಲ್ಲಿ ಉಪಬಂಧಿಸಲಾದ ಪರಿಹಾರೋಪಾಯವನ್ನು ಕೋರಬಹುದೆಂದು ಸ್ಪಷ್ಟವಾಗುತ್ತದೆ.

12. ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮ, 2005 ರ 3 ನೇ ಪ್ರಕರಣದೊಂದಿಗೆ 2 (ಎಫ್) ಪ್ರಕರಣವನ್ನು ಓದಿಕೊಳ್ಳುವ ಮೂಲಕ, ಗೃಹ ಸಂಬಂಧೀ ಹಿಂಸೆ ಅಧಿನಿಯಮದ 3 ನೇ ಪ್ರಕರಣದಲ್ಲಿ ನಮೂದಿಸಲಾದಂತಹ ಆ ಯಾವುದೇ ಕೃತ್ಯವನ್ನು ಎಸಗಿದರೆ ಅದನ್ನು ಗೃಹ ಸಂಬಂಧೀ ಹಿಂಸೆ ಎಂದು ಪರಿಗಣಿಸಲಾಗುತ್ತದೆ.ಗೃಹ ಸಂಬಂಧ ಎಂಬುದು ಜೊತೆಯಲ್ಲಿ ವಾಸವಾಗಿರುವ ಅಥವಾ ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಒಟ್ಟಿಗೆ ವಾಸವಾಗಿರುವ ಮತ್ತು ರಕ್ತ ಸಂಬಂಧದ ಮೂಲಕವಾಗಲೀ ಅಥವಾ ವಿವಾಹದ ಮೂಲಕವಾಗಲೀ ಅಥವಾ ವಿವಾಹ, ದತ್ತಕ ಸ್ವರೂಪದಲ್ಲಿನ ಸಂಬಂಧ ಮೂಲಕವಾಗಲೀ ಅಥವಾ ಅವಿಭಕ್ತ ಕುಟುಂಬದ ಜೊತೆಯಲ್ಲಿ ವಾಸಿಸುತ್ತಿರುವ ಕುಟುಂಬದ ಸದಸ್ಯರುಗಳು ಒಳಗೊಳ್ಳುತ್ತಾರೆ.ಅದರಲ್ಲಿ ನಮೂದಿಸಲಾದ ಸದರಿ ಪರಿಭಾಷೆಯು ಸಂಬಂಧದ ಕೆಲವು ಪ್ರವರ್ಗಗಳನ್ನು ಪ್ರವರ್ಗಿಸುತ್ತದೆ.ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು, ಇದೊಂದು ವ್ಯಾಪಕವಾದ ಪರಿಭಾಷೆಯಾಗಿದ್ದು ಇದರಲ್ಲಿ ವಿವಾಹವಾಗಿ ಹೊರ ಹೋಗಿರುವ, ನಂತರದಲ್ಲಿ ಮತ್ತೆ ಬಂದು ತನ್ನ ತಂದೆ ತಾಯಿಯರೊಂದಿಗೆ ವಾಸವಾಗಿರುವ ಮಗಳೂ ಸಹ ಗೃಹ ಸಂಬಂಧದಲ್ಲಿ ಒಳಗೊಳ್ಳುತ್ತಾಳೆ ಎಂದು ವಾದಿಸುತ್ತಾರೆ.ಆದರೆ, ಪರಿಭಾಷೆಯಿಂದ ಕಂಡುಬರುವಂತೆ ಇದು ಮೇಲ್ನೋಟಕ್ಕೆ ನಿರ್ಬಂಧಿತವಾದ ಮತ್ತು ವ್ಯಾಪಕವಾದ ಅರ್ಥವನ್ನು ಹೊಂದಿದೆ.ಕಾನೂನಿನ ಈ ಅಂಶವು ಇಂದ್ರ ಶರ್ಮ ವಿರುದ್ಧ ವಿ.ಕೆ.ವಿ ಶರ್ಮ 8 ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿದ ನಿರ್ಣಯದ 22 ನೇ, ಚ 34 ನೇ ಮತ್ತು 35 ನೇ ಪ್ಯಾರಾ ಈ ಕೆಳಗಿನಂತಿದೆ:

22. ನಾವು ಮೊದಲು ಅಪೀಲುದಾರರ ಎದುರುದಾರನೊಂದಿಗೆ ಹೊಂದಿರುವ ಸಂಬಂಧವು ಗೃಹ ಸಂಬಂಧಿ ಸಂಬಂಧವೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. 2 (ಎಫ್) ಪ್ರಕರಣದಲ್ಲಿ ಸಂಬಂಧಗಳ ಐದು ಪ್ರವರ್ಗಗಳನ್ನು ಉಲ್ಲೇಖಿಸಲಾಗಿದೆ.ಅವುಗಳು ಹೀಗಿದೆ.ರಕ್ತ ಸಂಬಂಧದ ಮೂಲಕ, ವಿವಾಹದ ಮೂಲಕ ಅಥವಾ ವಿವಾಹದ, ದತ್ತಕ ಸ್ವರೂಪದಲ್ಲಿನ ಸಂಬಂಧದ ಮೂಲಕ, ಅವಿಭಕ್ತ ಕುಟುಂಬದಲ್ಲಿ ಕುಟುಂಬ ಸದಸ್ಯರಾಗಿ ಒಟ್ಟಿಗೆ ವಾಸಿಸುತ್ತಿರುವಂತಹ ಸಂಬಂಧಗಳು.ಈ ಮೊಕದ್ದಮೆಯಲ್ಲಿ ನಾವು ವಿವಾಹದ ಸ್ವರೂಪದಲ್ಲಿ ಏರ್ಪಟ್ಟ ಆರೋಪಿತ ಸಂಬಂಧವನ್ನು ಪರಿಶೀಲಿಸಬೇಕಾಗುತ್ತದೆ.

ವಿವಾಹ ಸ್ವರೂಪದಲ್ಲಿನ ಸಂಬಂಧಗಳು:

34. ಗೃಹ ಸಂಬಂಧೀ ಹಿಂಸೆಯ ಅಧಿನಿಯಮದ ಮುಖಾಂತರ, ಆಧುನಿಕ ಭಾರತೀಯ ಸಮಾಜವು ಹಾಗೆಯೇ ಅಂಥ ಸಂಬಂಧವು ಇಲ್ಲಿಯವರೆಗೆ ಅರ್ಥಮಾಡಿಕೊಂಡ ಕೆಲವು ಅಂಗೀಕಾರಾರ್ಹ ವಿಧಾನಗಳ ಮೂಲಕ ಆಗಬಹುದೆಂಬ ಪರಿಕಲ್ಪನೆಯನ್ನು ಕೈಬಿಟ್ಟು ವಾಸ್ತವವಾಗಿ ಕೌಟುಂಬಿಕ ಸಂಬಂಧಗಳ ವಿವಿಧ ಇತರ ರೂಪಗಳ

8. (2013) 15 ಎಸ್ಸಿಸಿ 755

ಮುಖಾಂತರ ಗ್ರಹಿಸುತ್ತದೆ.2 (ಎಫ್) ಪ್ರಕರಣದಲ್ಲಿ, ಈಗಾಗಲೇ ಹೇಳಿರುವಂತೆ, ಇಬ್ಬರೂ ವ್ಯಕ್ತಿಗಳು (ವಿರುದ್ಧ ಲಿಂಗಿಗಳು) ಈ ಕೆಳಕಂಡ ವಿಧಾನಗಳ ಮೂಲಕ ಸಂಬಂಧ ಹೊಂದಿದ್ದಾಗ ಸಾಮೂಹಿಕ ವಾಸದ ಮನೆಯಲ್ಲಿ ವಾಸವಾಗಿರುವ ಅಥವಾ ಜೊತೆಯಲ್ಲಿ ಅ ವಾಸವಾಗಿರುವ ಇಬ್ಬರು ವ್ಯಕ್ತಿಗಳ ಸಂಬಂಧವನ್ನು ವ್ಯವಹರಿಸುತ್ತದೆ.ಎ 0 ದರೆ,

( ಎ) ರಕ್ತ ಸಂಬಂಧ

(ಬಿ) ವಿವಾಹ

(ಸಿ) ವಿವಾಹದ ಸ್ವರೂಪದಲ್ಲಿ ಏರ್ಪಟ್ಟ ಸಂಬಂಧ

(ಡಿ) ದತ್ತಕ

( ಇ) ಅವಿಭಕ್ತ ಕುಟುಂಬದಂತೆ ಒಟ್ಟಿಗೆ ವಾಸಿಸುತ್ತಿರುವ ಕುಟುಂಬ ಸದಸ್ಯರು:

35. ಪರಿಭಾಷೆಯ ಖಂಡದಲ್ಲಿ ಸಂಬಂಧಗಳ ಐದು ಪ್ರವರ್ಗಗಳನ್ನು ಮಾತ್ರವೇ ನಮೂದಿಸಲಾಗಿದೆ.ಇದರಲ್ಲಿ ' ಎಂದರೆ ' ಎಂಬ ಪದವನ್ನು ಬಳಸಲಾಗಿರುವುದರಿಂದ ಅದು ಸ್ವತಃ ನಿಸ್ಸಾರವಾಗಿರುತ್ತದೆ.ಪರಿಭಾಷೆಯ ಖಂಡದಲ್ಲಿ ' ಎಂದರೆ ' ಎಂಬ ಅಭಿವ್ಯಕ್ತಿಗೆ ಹೀಗೆ ಮತ್ತು ಹೀಗೆ ಎಂದು ಪರಿಭಾಷಿಸಿದಾಗ, ಪರಿಭಾಷೆಯನ್ನು ಮೇಲ್ನೋಟಕ್ಕೆ ನಿರ್ಬಂಧಿತ ಮತ್ತು ವ್ಯಾಪಕ ಅರ್ಥವನ್ನು ಪಡೆದುಕೊಳ್ಳುತ್ತದೆ.2 (ಎಫ್) ಪ್ರಕರಣದಲ್ಲಿ ಪರಿಭಾಷೆಯನ್ನು ವ್ಯಾಪಕವಾಗುವಂತೆ ಮಾಡುವ ಹಾಗೆ " ಒಳಗೊಳ್ಳು " ಎಂಬ ಪದವನ್ನು ಬಳಕೆ ಮಾಡಿರುವುದಿಲ್ಲ.ಈ ಹಿನ್ನೆಲೆಯಲ್ಲಿ " ವಿವಾಹ ಸ್ವರೂಪದ ಸ ಂ ಬ ಂ ಧ ' ಎ ಂ ಬ ಪದಾವಳಿಗಳ ಅರ್ಥವನ್ನು ನಾವು ಪರಿಶೀಲಿಸಬೇಕಾಗುತ್ತದೆ.

13. ಘನ ಸರ್ವೋಚ್ಚ ನ್ಯಾಯಾಲಯದ ಸದರಿ ನಿರ್ಣಯವನ್ನು ಪರಾಮರ್ಶಿಸಿದಾಗ, ಬಾಧಿತ ವ್ಯಕ್ತಿಯು ಜೊತೆಯಲ್ಲಿ ವಾಸಿಸುತ್ತಿರುವುದು, ಸಾಮೂಹಿಕ ವಾಸದ ಮನೆಯಲ್ಲಿ ಅರ್ಜಿದಾರರೊಂದಿಗೆ ವಾಸಿಸುತ್ತಿದ್ದು, ಆದರೆ ಅರ್ಜಿಯನ್ನು ದಾಖಲಿಸುವ ಮುಂಚೆಯಾಗಲೀ ಅಥವಾ ಯಾವುದೇ ಸಮಯದಲ್ಲಿ ಅವರುಗಳು ಹಾಗೆ ಜೊತೆಯಲ್ಲಿ ವಾಸಿಸಿದ್ದರೆ, ಬಾಧಿತ ವ್ಯಕ್ತಿಯ ಸಂಬಂಧದಲ್ಲಿ ಗೃಹ ಸಂಬಂಧವು ಉದ್ಭವವಾಗುತ್ತದೆ." 66 ಯಾವುದೇ ಸಮಯದಲ್ಲಿ " ಎಂಬ ಪದಾವಳಿಯ ಅರ್ಥದಲ್ಲಿ ಸಮಸ್ಯೆ ಉದ್ಭವವಾಗುತ್ತದೆ.ಎಂದರೆ, ಹಿಂದೆ ಯಾವುದೇ ಹಂತದಲ್ಲಿ ಒಟ್ಟಿಗೆ ವಾಸ ಮಾಡುತ್ತಿದ್ದರು ಎಂಬ ಅಂಶವು, ಒಬ್ಬ ವ್ಯಕ್ತಿಗೆ ಬಾಧಿತ ವ್ಯಕ್ತಿಯಾಗಿರುವರೆಂದು ಗೃಹ ಸಂಬಂಧವನ್ನು ಕ್ಲೇಮು ಮಾಡಲು ಹಕ್ಕನ್ನು ನೀಡುತ್ತದೆಂದು ಇದರ ಅರ್ಥವಲ್ಲ.ಯಾವುದೇ ಸಮಯದಲ್ಲಿ ಎಂಬ ಪದಾವಳಿಯು, ಬಾಧಿತ ವ್ಯಕ್ತಿಯು ಸಾಮೂಹಿಕ ವಾಸದ ಮನೆಯಲ್ಲಿ ಹಕ್ಕಿನ ವಿಷಯವಾಗಿ ನಿರಂತರವಾಗಿ ವಾಸವಾಗಿರುತ್ತಾನೆ ಎಂದು ಸೂಚಿಸುತ್ತದೆ.ಆದರೆ, ಬಾಧಿತವ್ಯಕ್ತಿ ಕೆಲವೊಂದು ಕಾರಣಗಳಿಂದ ತಾತ್ಕಾಲಿಕವಾಗಿ ಸಾಮೂಹಿಕ ವಾಸದ ಮನೆಯನ್ನು ಬಿಟ್ಟಿದ್ದರೆ ಮತ್ತು ಅವಳು ಹಿಂದಿರುಗಿದಾಗ, ಸ್ವತ್ತಿನಲ್ಲಿ ಅವಳು ವಾಸಿಸುವ ಅವಳ ಅನುಭೋಗದ ಹಕ್ಕನ್ನು ಪುರಸ್ಕರಿಸಲಾಗುವುದಿಲ್ಲ.ಕುಟುಂಬದ ಸದಸ್ಯರು ಅವನು ಅಥವಾ ಅವಳು ತನ್ನದೇ ಮನೆಯೆಂದು ಸುಸ್ಥಾಪಿಸಲು ಸಾಮೂಹಿಕ ವಾಸದ ಮನೆಯಲ್ಲಿ ವಾಸಿಸುತ್ತಿದ್ದಲ್ಲಿ ಗೃಹ ಸಂಬಂಧದ ಆಧಾರದ ಮೇಲೆ ಗೃಹ ಸಂಬಂಧಿ ಹಿಂಸೆ ಅಧಿನಿಯಮದ 12 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಹಕ್ಕನ್ನು ಹೊಂದಲು ಕ್ಲೇಮು ಮಾಡಲು ಸಾಧ್ಯವಿಲ್ಲ.ವಿಜಯ ವರ್ಮ ವಿರುದ್ಧ-ದೆಹಲಿ ಸರ್ಕಾರ (ಎನ್ಸಿಐ) ಮತ್ತು ಇನ್ನೊಬ್ಬರು, 9 ಮೊಕದ್ದಮೆಯಲ್ಲಿ, ದೆಹಲಿ ಉಚ್ಚ ನ್ಯಾಯಾಲಯದ ಚ ಮುಂದೆ ಈ ಪ್ರಸ್ತಾವನೆಯು ಬಂದಿದ್ದು, ಅದು ತನ್ನ ನಿರ್ಣಯದ 6 ನೇ ಪ್ಯಾರಾದಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

6. ಈ ಉಪಬಂಧಗಳ ಅವಲೋಕನದಿಂದ, ಬಾಧಿತ ವ್ಯಕ್ತಿ ಪ್ರತ್ಯರ್ಜಿದಾರನೊಂದಿಗೆ ಸಾಮೂಹಿಕ ವಾಸದ ಮನೆಯಲ್ಲಿ ಒಟ್ಟಿಗೆ

9. 2010 ಎಸ್ಸಿ ಆನಲೈನ್ ದೆಹಲಿ 2723

ವಾಸವಾಗಿದ್ದರೆ, ಆಗ ಬಾಧಿತ ವ್ಯಕ್ತಿಯ ಸಂಬಂಧದಲ್ಲಿ ಗೃಹ ಸಂಬಂಧದ ಪ್ರಶ್ನೆಯು ಉದ್ಭವವಾಗುತ್ತದೆ ಎಂದು ಸ್ಪಷ್ಟವಾಗುತ್ತದೆ.ಅರ್ಜಿಯನ್ನು ದಾಖಲಿಸುವ ಮುಂಚೆಯಾಗಲೀ ಅಥವಾ ಯಾವುದೇ ಸಮಯದಲ್ಲಿ ಅವರುಗಳು ಹಾಗೆ ಜೊತೆಯಲ್ಲಿ ವಾಸಿಸಿದ್ದರೆ, ಬಾಧಿತ ವ್ಯಕ್ತಿಯ ಸಂಬಂಧದಲ್ಲಿ ಗೃಹ ಸಂಬಂಧವು ಉದ್ಭವವಾಗುತ್ತದೆ." ಯಾವುದೇ ಸಮಯದಲ್ಲಿ " ಎಂಬ ಪದಾವಳಿಯ ಅರ್ಥದಲ್ಲಿ ಸಮಸ್ಯೆ ಉದ್ಭವವಾಗುತ್ತದೆ.ಎಂದರೆ, ಹಿಂದೆ ಯಾವುದೇ ಹಂತದಲ್ಲಿ ಒಟ್ಟಿಗೆ ವಾಸ ಮಾಡುತ್ತಿದ್ದರು ಎಂಬ ಅಂಶವು, ಒಬ್ಬ ವ್ಯಕ್ತಿಗೆ ಬಾಧಿತ ವ್ಯಕ್ತಿಯಾಗಿರುವರೆಂದು ಗೃಹ ಸಂಬಂಧವನ್ನು ಕ್ಲೇಮು ಮಾಡಲು ಹಕ್ಕನ್ನು

ನೀಡುತ್ತದೆಂದು ಇದರ ಅರ್ಥವಲ್ಲ.ಯಾವುದೇ ಸಮಯದಲ್ಲಿ ಎಂಬ ಪದಾವಳಿಯು, ಬಾಧಿತ ವ್ಯಕ್ತಿಯು ಸಾಮೂಹಿಕ ವಾಸದ ಮನೆಯಲ್ಲಿ ಹಕ್ಕಿನ ವಿಷಯವಾಗಿ ನಿರಂತರವಾಗಿ ವಾಸವಾಗಿರುತ್ತಾನೆ ಎಂದು ಸೂಚಿಸುತ್ತದೆ.ಆದರೆ, ಬಾಧಿತವ್ಯಕ್ತಿ ಕೆಲವೊಂದು ಕಾರಣಗಳಿಂದ ತಾತ್ಕಾಲಿಕವಾಗಿ ಸಾಮೂಹಿಕ ವಾಸದ ಮನೆಯನ್ನು ಬಿಟ್ಟಿದ್ದರೆ ಮತ್ತು ಅವಳು ಹಿಂದಿರುಗಿದಾಗ, ಸ್ವತ್ತಿನಲ್ಲಿ ಅವಳು ವಾಸಿಸುವ ಅವಳ ಅನುಭೋಗದ ಹಕ್ಕನ್ನು ಪುರಸ್ಕರಿಸಲಾಗುವುದಿಲ್ಲ.ಆದಾಗ್ಯೂ, " ಯಾವುದೇ ಸಮಯದಲ್ಲಿ ೨೨ ಈ ಪದಾವಳಿಯು ಬದುಕುವ ಹಕ್ಕು ಅಸ್ತಿತ್ವದಲ್ಲಿರಲಿ ಅಥವಾ ಇಲ್ಲದಿರಲಿ " ಭೂತಕಾಲದ ಯಾವುದೇ ಸಮಯದಲ್ಲಿ " ಎಂದು ಪರಿಭಾಷಿಸುವುದಿಲ್ಲ.ಉದಾಹರಣೆಗೆ ಒಂದು ಅವಿಭಕ್ತ ಕುಟುಂಬದಲ್ಲಿ ಒಬ್ಬ ತಂದೆಯು ಒಂದೇ ಮನೆಯಲ್ಲಿ ಗಂಡು ಮಕ್ಕಳು ಮತ್ತು ಸೊಸೆಯಂದಿರೊಂದಿಗೆ ಒಟ್ಟಿಗೆ ವಾಸ ಮಾಡುತ್ತಿರುತ್ತಾರೆ.ಕೊನೆಯಲ್ಲಿ ಗಂಡು ಮಕ್ಕಳು ಒಬ್ಬೊಬ್ಬರಾಗಿ ಅಥವಾ ಒಟ್ಟಿಗೆ ತಮ್ಮ ಸ್ವಂತ ಕುಟುಂಬಗಳಲ್ಲಿ ವಾಸ ಮಾಡುವುದಕ್ಕೆ ತೀರ್ಮಾನಿಸಿ ತಮ್ಮದೇ ಸ್ವಂತ ಕುಟುಂಬಗಳಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಪ್ರತ್ಯೇಕವಾಗಿ ವಾಸಮಾಡುವುದಕ್ಕೆ ಪ್ರಾರಂಭಿಸುತ್ತಾರೆ.ಹೀಗಿರುವಾಗ ಮಾವನ ಮನೆಯಲ್ಲಿ ವಾಸವಾಗಿರುವ ಸೊಸೆಯಂದಿರು ಸಹ ತಮ್ಮ ಗಂಡಂದಿರೊಂದಿಗೆ ಯಾವುದೇ ಒಂದು ನಿರ್ದಿಷ್ಟ ಸಮಯದಲ್ಲಿ ಸಾಮೂಹಿಕ ವಾಸದ ಮನೆಯಲ್ಲಿ ತಾವು ವಾಸವಾಗಿದ್ದೆವೆಂಬ ಕಾರಣದ ಮೇಲೆ ಪ್ರತಿಯೊಬ್ಬ ಮಗನ ಹೆಂಡತಿಯು ಮಾವನ ಮನೆಯಲ್ಲಿ ಬದುಕುವ ಹಕ್ಕನ್ನು ಕ್ಲೈಮು ಮಾಡಬಹುದು ಎ ಂ ದು ಅರ್ಥೈಸಬಹುದೆ?ಇದನ್ನು ಸಾಮೂಹಿಕ ವಾಸದ ಮನೆಗೆ ಅನ್ವಯಿಸಿದರೆ, ಗೃಹ ಸಂಬಂಧಿ ಹಿಂಸೆ ಅಧಿನಿಯಮದ ಉದ್ದೇಶವು ವಿಫಲವಾಗುತ್ತದೆ.ಕುಟುಂಬದ ಒಬ್ಬ ಸದಸ್ಯನು ಸಾಮೂಹಿಕ ವಾಸದ ಮನೆಯನ್ನು ಬಿಟ್ಟು ಹೋಗಿ, ತನ್ನದೇ ಸ್ವಂತ ಮನೆಯನ್ನು ವಾಸ್ತವವಾಗಿ ಸುಸ್ಥಾಪಿಸಿಕೊಂಡಲ್ಲಿ, ಗೃಹ ಸಂಬಂಧದ ಆಧಾರದ ಮೇಲೆ ಗೃಹ ಸಂಬಂಧೀ ಹಿಂಸೆ ಅಧಿನಿಯಮದಿಂದ ಮಹಿಳೆಯರ ರಕ್ಷಣೆ ಅಧಿನಿಯಮದ 12 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಹಕ್ಕನ್ನು ಹೊಂದಿರುವುದಿಲ್ಲ.ಮಗನು ತನ್ನ ಕುಟುಂಬದೊಂದಿಗೆ ಒಮ್ಮೆ ಅವಿಭಕ್ತ ಕುಟುಂಬದಿಂದ ಹೊರಬಂದು ತನ್ನದೇ ಕುಟುಂಬವನ್ನು ಹೊಂದಿದರೆ, ಗೃಹ ಸಂಬಂಧವು ಅಲ್ಲಿಗೆ ಮುಕ್ತಾಯವಾಗುತ್ತದೆ ಅಥವಾ ಮಗಳು ವಿವಾಹವಾಗಿ ತನ್ನ ಗಂಡನೊಂದಿಗೆ ತನ್ನದೇ ಸ್ವಂತ ಮನೆಯನ್ನು ಸುಸ್ಥಾಪಿಸಿಕೊಂಡಾಗ, ಅವಳಿಗೆ ಸಾಮೂಹಿಕ ವಾಸದ ಮನೆಯಲ್ಲಿನ ಗೃಹ ಸಂಬಂಧವು ಅಲ್ಲಿಗೆ ಅಂತ್ಯಗೊಳ್ಳುತ್ತದೆ.ಅಂಥ ಮಗ, ಮಗಳು, ಸೊಸೆ, ಅಳಿಯ ಇವರುಗಳು ದಾಯಾದಿತ್ವ ಅಥವಾ ಪಿತ್ರಾರ್ಜಿತ ವಾರಸುದಾರಿಕೆಯ ಕಾರಣದಿಂದ ಸ್ವತ್ತಿನಲ್ಲಿ ಯಾವುದೇ ಹಕ್ಕನ್ನು ಹೊಂದಿರುವ ಸಂದರ್ಭದಲ್ಲಿ, ಅಂಥ ಹಕ್ಕನ್ನು ಪ್ರತ್ಯೇಕ ಸಿವಿಲ್ ದಾವೆಯನ್ನು ಹೂಡುವ ಮೂಲಕ ಕ್ಲೇಮು ಮಾಡಬಹುದೇ ಹೊರತು, ವ್ಯಕ್ತಿಯು ತನ್ನದೇ ಪ್ರತ್ಯೇಕ ವಾಸದ ಮನೆಯನ್ನು ಸುಸ್ಥಾಪಿಸಿಕೊಂಡಲ್ಲಿ ಮತ್ತು ಸಾಮೂಹಿಕ ವಾಸದ ಮನೆಯಲ್ಲಿ ಗೃಹ ಸಂಬಂಧವು ಅ ಮುಕ್ತಾಯಗೊಂಡಿರುವ ವ್ಯಕ್ತಿಯು ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ ಅಧಿನಿಯಮದ ಅಡಿಯಲ್ಲಿ ಅರ್ಜಿಯನ್ನು ದಾಖಲಿಸುವುದಕ್ಕೆ ಸಾಧ್ಯವಿಲ್ಲ.ಸಾಮೂಹಿಕ ವಾಸದ ಮನೆಯಲ್ಲಿ ಒಂದೇ ಚಾವಣಿಯ ಅಡಿಯಲ್ಲಿ ಪಕ್ಷಕಾರರು ಜೀವಿಸುವವರೆಗೆ ಮಾತ್ರವೇ ಗೃಹ ಸಂಬಂಧವು ಮುಂದುವರೆಯುತ್ತದೆ.ಬಾಧಿತ ವ್ಯಕ್ತಿ ಒತ್ತಾಯ ಪೂರ್ವಕವಾಗಿ ಅಥವಾ ತಾತ್ಕಾಲಿಕವಾಗಿ ಸಾಮೂಹಿಕ ವಾಸದ ಮನೆಯಿ ಂ ದ ಹೊರ ಹೋಗಿದ್ದಾಗ ಅದು ಯಾವುದೇ ಸಮಯದಲ್ಲಿ ಎಂಬ ಪದಾವಳಿಯ ವ್ಯಾಪ್ತಿಯಲ್ಲಿ ಬರುತ್ತದೆ.ಎಂದರೆ ಪತ್ನಿಯು ಅವಳ ತಂದೆ ತಾಯಿಯರ ಮನೆಗೆ ಅಥವಾ ಸಂಬಂಧಿಕರ ಮನೆಗೆ ಹೋದಾಗ ಅಥವಾ ಇತರ ಕೆಲ ಮಹಿಳಾ ಸದಸ್ಯರು ತನ್ನ ಕೆಲವು ಸಂಬಂಧಿಕರೊಂದಿಗೆ ವಾಸಿಸಲು ಹೋಗಿರುವಾಗ ಆದರೆ, ಅವಳಿಗೆ ಸೇರಿದ ವಸ್ತುಗಳೆಲ್ಲವು ಅದೇ ಮನೆಯಲ್ಲಿ ಉಳಿದುಕೊಂಡಿದ್ದಲ್ಲಿ ಮತ್ತು ಅವಳು ಆ ಸಾಮೂಹಿಕ ವಾಸದ ಮನೆಯನ್ನು ಖಾಯಂ ಆಗಿ ಬಿಡದಿರುವ ಪಕ್ಷದಲ್ಲಿ ಅವಳ ಗೃಹ ಸಂಬಂಧವು ಹಾಗೆಯೇ ಮುಂದುವರೆಯುತ್ತದೆ.ಆದಾಗ್ಯೂ, ಜೊತೆಯಲ್ಲಿ ವಾಸವಾಗಿರುವುದನ್ನು ಬಿಟ್ಟುಬಿಟ್ಟಿದಲ್ಲಿ ಮತ್ತು ಪ್ರತ್ಯೇಕ ಮನೆಯನ್ನು ಸುಸ್ಥಾಪಿಸಿದ್ದಲ್ಲಿ ಹಾಗೂ ಅವರಿಗೆ ಸೇರಿದ ವಸ್ತುಗಳೆಲ್ಲವನ್ನು ತೆಗೆದುಕೊಂಡು ಹೋಗಿದ್ದಲ್ಲಿ ಗೃಹ ಸಂಬಂಧಿ ಸಂಬಂಧವು ಮುಕ್ತಾಯವಾಗುತ್ತದೆ.ಆದರೆ ಪರಸ್ಪರ ಸಂಬಂಧಿಕರ ನಡುವಿನ ಸಂಬಂಧವು ಹಾಗೆಯೇ ಉಳಿದಿರುತ್ತದೆ.ಸಾಮಾನ್ಯವಾಗಿ ಇತ್ತೀಚಿನ ಕುಟುಂಬಗಳಲ್ಲಿ ಗಂಡಾಗಲೀ ಅಥವಾ ಹೆಣ್ಣಾಗಲೀ ಶಿಕ್ಷಣದ ತರುವಾಯ ಅಥವಾ ಅನ್ಯಥಾ ಸ್ವಾವಲಂಬನೆಯನ್ನು ಹೊಂದಲು ಮತ್ತು ಉದ್ಯೋಗವನ್ನು ಪಡೆದುಕೊಂಡು ಇತರ ನಗರ ಅಥವಾ ಬೇರೆ ದೇಶದಲ್ಲಿ ನೆಲೆಸಿ, ಅಲ್ಲಿಯೇ ಬದುಕನ್ನು ಕಟ್ಟಿಕೊಂಡು ಮನೆಯನ್ನು ಮಾಡಿಕೊಂಡು ಬದುಕಿನ ನೆಲೆ ಕಂಡುಕೊಳ್ಳುವುದು ತುಂಬಾ ಸಹಜ ಪ್ರವೃತ್ತಿಯಾಗಿದೆ.ಈ ಸಂದರ್ಭದಲ್ಲಿ ಆ ವ್ಯಕ್ತಿಯು ಬಿಟ್ಟು ಹೋದ ಕುಟುಂಬದ ಇತರ ವ್ಯಕ್ತಿಗಳೊಂದಿಗೆ ಗೃಹ ಸಂಬಂಧೀ ಸಂಬಂಧವನ್ನು ಹೊಂದಿರುತ್ತಾನೆ ಎಂದು ಹೇಳಲು ಸಾಧ್ಯವಿಲ್ಲ.ಅವರ ಸಂಬಂಧವು ಸಹೋದರ-ಸಹೋದರಿ ತಂದೆ-ಮಗ, ತಂದೆ-ಮಗಳು, ತಂದೆ ಮತ್ತು ಸೊಸೆಯ ಸಂಬಂಧ ಇತ್ಯಾದಿಯಾಗಿ ಹಾಗೆಯೇ

ಉಳಿದುಕೊಳ್ಳುತ್ತವೆ.ಆದರೆ, ಅವಿಭಕ್ತ ಕುಟುಂಬದಲ್ಲಿರುವ ಗೃಹ ಸಂಬಂಧೀ ಸಂಬಂಧವು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಅದು ಮುಕ್ತಾಯವಾಗುತ್ತದೆ.

14. ಈ ಉಪಬಂಧವನ್ನು ಅವಗಾಹಿಸಿದಾಗ, ಬಾಧಿತ ವ್ಯಕ್ತಿಯು ಪ್ರತ್ಯರ್ಜಿದಾರನೊಂದಿಗೆ ಸಾಮೂಹಿಕ ವಾಸದ ಮನೆಯಲ್ಲಿ ವಾಸ ಮಾಡುತ್ತಿದ್ದರೆ, ಆಗ ಅಂಥ ಬಾಧಿತ ವ್ಯಕ್ತಿಯ ಸಂಬಂಧದಲ್ಲಿ ಗೃಹ ಸಂಬಂಧೀ ಸಂಬಂಧದ ಪ್ರಶ್ನೆ ಉದ್ಭವವಾಗುತ್ತದೆಂದು ಸ್ಪಷ್ಟವಾಗುತ್ತದೆ.ಬಾಧಿತ ವ್ಯಕ್ತಿ ಯಾರು ಎಂಬ ಅಂಶವು ಶ್ರೀಮತಿ ಲೀಲಾವತಿ ಎಸ್ -ವಿರುದ್ಧ-ಶ್ರೀ ಮುರುಗೇಶ್ ಮತ್ತು ಇತರರು ಮೊಕದ್ದಮೆಯು ಈ ನ್ಯಾಯಾಲಯದ ವಿಭಾಗೀಯ ಪೀಠದ ಮುಂದೆ ಬಂದಿರುತ್ತದೆ.ಸದರಿ ನಿರ್ಣಯದಲ್ಲಿ, ಗೃಹ ಸಂಬಂಧದಲ್ಲಿದ್ದು, ಹಿಂದೆ ಅಥವಾ ಪ್ರಸ್ತುತ ಅವನಿಂದ ಕೌಟುಂಬಿಕ ಹಿಂಸೆಗೆ ಒಳಗಾಗಿರುವ ಮಹಿಳೆಯೇ ಬಾಧಿತ ವ್ಯಕ್ತಿ ಎಂದು ಅಭಿಪ್ರಾಯಪಡಲಾಗಿದೆ.

15. ಸಾಮೂಹಿಕ ವಾಸದ ಮನೆಯ ಬಗ್ಗೆ ಗೃಹ ಸಂಬಂಧಿ ಹಿಂಸೆ ಅಧಿನಿಯಮದ 2 (ಎಸ್) ಪ್ರಕರಣದಲ್ಲಿ ಪರಿಭಾಷಿಸಲಾಗಿದೆ.ಡಿ. ವೇಲುಸ್ವಾಮಿ -ವಿರುದ್ಧ-ಡಿ.ಪಟ್ಟಿಯಮ್ಮಾಳ್ 11 " ಮೊಕದ್ದಮೆಯಲ್ಲಿ ಘನ ಸರ್ವೋಚ್ಚ ನ್ಯಾಯಾಲಯವು “ ಗೃಹ ಸಂಬಂಧೀ ಸಂಬಂಧ'ವನ್ನು ವಿವಾಹದ ಸಂಬಂಧವನ್ನು ಮಾತ್ರ ಅಷ್ಟೇ ಅಲ್ಲದೆ, “ ವಿವಾಹದ ಸ್ವರೂಪದಲ್ಲಿ'ನ ಸಂಬಂಧವನ್ನು ಸಹ ಒಳಗೊಳ್ಳುತ್ತದೆ ಎಂದು ಪರಿಭಾಷಿಸುತ್ತದೆ.ಆ ತರುವಾಯ ಶ್ರೀಮತಿ ಜಿ.ಎ. ಫೆರೀಸ್ -ವಿರುದ್ಧ ಸ್ವೆಪ್ಲಾನ ಅಲೆಕ್ಸಾಂಡೋಮ್ನ ಡೊಚಸೋವ ಫೇರಿಸ್ ಮತ್ತು ಇನ್ನೊಬ್ಬರು

10. ಐಎಲ್ಆರ್ 2010 ಕರ್ನಾಟಕ 4673

11. (2010) 10 ಎಸ್ಸಿಸಿ 469

12. (2014) 2 ಕೆಸಿಸಿಆರ್ 1797 1108

ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠವು ಗೃಹ ಸಂಬಂಧೀ ಹಿಂಸೆ ಅಧಿನಿಯಮದ 2 (ಎಸ್) ಪ್ರಕರಣವನ್ನು ಪರಿಭಾಷಿಸುತ್ತಾ, ಅತ್ತೆಯು ತನ್ನದೇ ಸ್ವಯಾರ್ಜಿತವಾದ ಸ್ವಂತ ಮನೆಯ ಸ್ವತ್ತನ್ನು ಹೊಂದಿದ್ದರೆ, ಅದನ್ನು ಗೃಹ ಸಂಬಂಧೀ ಹಿಂಸೆ ಅಧಿನಿಯಮದ 2 (ಎಸ್) ಪ್ರಕರಣದ ಅಡಿಯಲ್ಲಿ ಪರಿಭಾಷಿಸಿದಂತೆ ಅದನ್ನು ಸಾಮೂಹಿಕವಾಸದ ಮನೆಯೆಂದು ಪರಿಗಣಿಸಲು ಸಾಧ್ಯವಿಲ್ಲ.ಈ ಮೊಕದ್ದಮೆಯಲ್ಲಿ 15 ಮತ್ತು 16 ನೇ ಪ್ಯಾರಾದಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

15. ಪ್ರಶ್ನಿತ ಆದೇಶವನ್ನು ಪರಿಶೀಲಿಸಿದಾಗ, ಮಾನ್ಯ ಮ್ಯಾಜಿಸ್ಟ್ರೇಟರ ಮುಂದೆ ದೂರುದಾರಳಾಗಿರುವ 1 ನೇ ಪ್ರತ್ಯರ್ಜಿದಾರ-ಪತ್ನಿಯು ದೂರಿನಲ್ಲಿ ಅತ್ತೆಗೆ ಪ್ರತ್ಯೇಕವಾಗಿ ಸೇರಿದ ಮನೆಯಲ್ಲಿ ಸಾಮೂಹಿಕ ವಾಸದ ಮನೆಯೆಂದು ಕ್ಲೇಮನ್ನು ಸ್ಥಾಪಿಸಲು ಪ್ರಯತ್ನಿಸಿದ್ದಾಳೆಂಬುದು ಸ್ಪಷ್ಟವಾಗುತ್ತದೆ.1 ನೇ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಅವಲಂಬಿಸಿರುವ ಯಾವುದೇ ತೀರ್ಪುಗಳು ಪ್ರಸಕ್ತ ಮೊಕದ್ದಮೆಯಲ್ಲಿನ ಯಾವುದೇ ಸಂಗತಿಗಳಿಗೆ ಯಾವುದೇ ರೀತಿಯಲ್ಲೂ ಸಂಬಂಧಿಸುವುದಿಲ್ಲ.ಇದಕ್ಕೆ ತದ್ವಿರುದ್ಧವಾಗಿ ಅರ್ಜಿದಾರರು ಅವಲ ೦ ಬಿಸಿರುವ ಎಸ್.ಆರ್. ಬಾತ್ರ (ಮೇಲೆ ಉಲ್ಲೇಖಿಸಿದ) ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪು, ಇದರಲ್ಲಿ ಅರ್ಜಿದಾರಳು ಹೊಂದಿರುವ ಮನೆಯು ಸಂಪೂರ್ಣವಾಗಿ ಅವಳದೇ ಸ್ವತ್ತಾಗಿರುವುದರಿಂದ ಅದನ್ನು ಅಧಿನಿಯಮದ 2 (ಎಸ್) ಪ್ರಕರಣದ ಅಡಿಯಲ್ಲಿ ಪರಿಭಾಷಿಸಲಾದ ಸಾಮೂಹಿಕ ವಾಸದ ಮನೆ ಎಂದು ಪರಿಗಣಿಸಲು ಬರುವುದಿಲ್ಲ ಎಂದು ಅಂಗೀಕರಿಸುವಲ್ಲಿ ಪ್ರಸಕ್ತ ಮೊಕದ್ದಮೆಯ ನಾಲ್ಕೂ ಅಂಶಗಳಿಗೆ ಯಥಾವತ್ತಾಗಿ ಅನ್ವಯವಾಗುತ್ತದೆ.

16. ದೂರುದಾರ-ಮೊದಲ ಪ್ರತ್ಯರ್ಜಿದಾರರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಮಾಡಿದ ಪ್ರಯತ್ನ ಶ್ಲಾಘನೀಯವಾಗಿದ್ದರೂ, ಸಂಗತಿ ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿ, ಶೋಚನೀಯ ಸ್ಥಿತಿಯಲ್ಲಿರುವಳೆಂದು ಹೇಳಲಾದ ಪತ್ನಿ ಅವಳ ಇಚ್ಛೆಗೆ ವಿರುದ್ಧವಾಗಿ ಅವಳ ವಯಸ್ಸಾದ ಅತ್ತೆಗೆ ಸಂಪೂರ್ಣವಾಗಿ ಸೇರಿದ ಮನೆಯಲ್ಲಿ ಇರುವಂತೆ ಅನುಮತಿಸುವ ಮೂಲಕ ಈ ನ್ಯಾಯಾಲಯವೇ ಸ್ವತಃ ದಾರಿ ತಪ್ಪಿಸಬಾರದು.ಅರ್ಜಿದಾರಳಿಗೆ 82 ವರ್ಷಗಳ ವಯಸ್ಸಾಗಿದ್ದು, ತನ್ನ ಜೀವನದ ಸಂಧ್ಯಾಕಾಲದಲ್ಲಿದ್ದಾಳೆ.ಒಂದನೇ ಪ್ರತ್ಯರ್ಜಿದಾರಳ ಪತಿ ಅರ್ಜಿದಾರಳ ಮಗನಾಗಿದ್ದಾನೆಂಬ ಕಾರಣ ಮಾತ್ರಕ್ಕೆ ತನ್ನ ಇಚ್ಛೆಗೆ ವಿರುದ್ಧವಾಗಿ ತನ್ನ ಸೊಸೆಗೆ ಸ್ಥಳಾವಕಾಶವನ್ನು ಒದಗಿಸುವುದಕ್ಕೆ ಅವಳನ್ನು ಬಾಧ್ಯಸ್ಥಳನ್ನಾಗಿ ಮಾಡಲಾಗುವುದಿಲ್ಲ.ಮೊಕದ್ದಮೆಯ ಗುಣಾರ್ಹತೆಯ ಆಧಾರದ ಮೇಲೆ ಪ್ರತಿಯೊ ೦ ದು ಸ ೦ ಗತಿಯನ

ನಿರ್ಧರಿಸಬೇಕಾಗುತ್ತದೆಂಬ ಮಟ್ಟಿಗೆ ಈ ನ್ಯಾಯಾಲಯದ ಸನ್ನಿಧಿಗೆ ಅಪೀಲನ್ನು ಸಲ್ಲಿಸುವಲ್ಲಿ ದೂರುದಾರ -1 ನೇ ಪ್ರತ್ಯರ್ಜಿದಾರರ ಪರವಾಗಿ ಮಾಡಿದ ನಿವೇದನೆಗೆ ಯುಕ್ತ ಪರಿಗಣನೆಯನ್ನು ನೀಡಿದರೂ ಕೂಡ, ಅಧಿನಿಯಮದ 19 ( 1) (ಎ) ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ 23 ( 2) ಪ್ರಕರಣದ ಅಡಿಯಲ್ಲಿ 1 ನೇ ಪ್ರತ್ಯರ್ಜಿದಾರ-ದೂರುದಾರನು ದಾಖಲಿಸಿದ ಅರ್ಜಿಯನ್ನು ಯಾವುದೇ ಸಂದರ್ಭದಲ್ಲೂ ಪರಿಗಣಿಸಲು ಸಾಧ್ಯವಾಗುವುದಿಲ್ಲ.

16. ಎಸ್.ಆರ್. ಬಾತ್ರ ಮತ್ತು ಇನ್ನೊಬ್ಬರು -ವಿರುದ್ಧ-ತರುಣ ಬಾತ್ರ (ಶ್ರೀಮತಿ) ಮೊಕದ್ದಮೆಯಲ್ಲಿ ಘನ ಸರ್ವೋಚ್ಚ ನ್ಯಾಯಾಲಯದ ಮುಂದೆ ಇದೇ ರೀತಿಯ ವಿಷಯವು ಪರಿಗಣನೆಗೆ ಬಂದಿತ್ತು.ಅದರಲ್ಲೂ ಸಹ 2 (ಎಸ್) ಪ್ರಕರಣವನ್ನು ಪರಿಭಾಷಿಸಿದೆ ಮತ್ತು ಅದರಲ್ಲಿ ಒಬ್ಬ ಮಹಿಳೆಯು ತನ್ನ ಅತ್ತೆಗೆ ಸಂಪೂರ್ಣವಾಗಿ ಸೇರಿದ ಮನೆಯಲ್ಲಿ ತನ್ನ ಮದುವೆ ನಂತರದಲ್ಲಿ ಹಿಂದೆ ಕೆಲ ಸಮಯ ತನ್ನ ಗಂಡನೊಂದಿಗೆ ಆ ಮನೆಯಲ್ಲಿ ವಾಸವಾಗಿದ್ದಾಗ ಅದು ಸಾಮೂಹಿಕ ವಾಸದ ಮನೆಯಾಗಿರುವುದಿಲ್ಲ ಎಂದು ನಿರ್ಣಯಿಸಿದೆ.ಮುಂದುವರೆದು, ಸ್ವತ್ತಿನ ಮೇಲೆ ಹಾಗೆ ಕ್ಲೇಮು ಮಾಡಿಕೊಳ್ಳಬೇಕಾದರೆ, ಆ ಸ್ವತ್ತು ಅವಳ ಗಂಡನಿಗೆ ಸೇರಿದ ಸ್ವತ್ತು ಅಥವಾ ಅವಳ ಗಂಡನಿಂದ ಬಾಡಿಗೆಗೆ ಪಡೆದುಕೊಂಡಿರುವ ಅಥವಾ ಅವಳ ಗಂಡ ಸದಸ್ಯನಾಗಿರುವ ಅವಿಭಕ್ತ ಕುಟುಂಬದ ಸ್ವತ್ತಾಗಿರಬೇಕು ಎಂದು ಅದು ನಿರ್ಣಯಿಸಿದೆ.ಪ್ರಸಕ್ತ ಮೊಕದ್ದಮೆಯಲ್ಲಿ ಸದರಿ ಸ್ವತ್ತು ಅತ್ತೆಗೆ ಸೇರಿದ ಸ್ವತ್ತಾಗಿದೆ.ಆದುದರಿಂದ, ಅತ್ತೆಯ ಸ್ವಯಾರ್ಜಿತ ಮನೆಯಲ್ಲಿ ವಾಸ ಮಾಡುವ ಯಾವುದೇ ಹಕ್ಕನ್ನು ಪ್ರತ್ಯರ್ಜಿದಾರಳು ಕ್ಲೇಮು ಮಾಡುವಂತಿಲ್ಲ ಎಂದು ನಿರ್ಣಯಿಸಿದೆ.29 ನೇ ಪ್ಯಾರಾದಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

*29. ಅಧಿನಿಯಮದ 17 ( 1) ನೇ ಪ್ರಕರಣಕ್ಕೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ ಪತ್ನಿಯು ಸಾಮೂಹಿಕ ವಾಸದ ಮನೆಯಲ್ಲಿ ವಾಸಿಸುವ ಹಕ್ಕನ್ನು ಕ್ಲೇಮು ಮಾಡುವುದಕ್ಕೆ ಮಾತ್ರವೇ ಹಕ್ಕುಳ್ಳವಳಾಗಿರುತ್ತಾಳೆ ಮತ್ತು ಸಾಮೂಹಿಕ ವಾಸದ ಮನೆ ಎಂದರೆ D ಪತಿಗೆ ಸೇರಿದ ಮನೆ ಅಥವಾ ಪತಿಯಿಂದ ಬಾಡಿಗೆ ಪಡೆದ ಮನೆ ಎಂದರ್ಥ ಅಥವಾ ಅವಳ ಪತಿಯೂ ಸದಸ್ಯನಾಗಿರುವ ಅವಿಭಕ್ತ ಕುಟುಂಬಕ್ಕೆ ಸೇರಿದ ಮನೆಯೇ ಸಾಮೂಹಿಕ ವಾಸದ ಮನೆ ಎಂದು ಅರ್ಥೈಸಲಾಗಿದೆ.ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರಶ್ನಿತ ಸ್ವತ್ತು ಅಮಿತ್ ಬಾತ್ರಾಗೆ ಸೇರಿದ ಸ್ವತ್ತಾಗಿರುವುದಿಲ್ಲ ಅಥವಾ ಅವನು ಬಾಡಿಗೆಗೆ ಪಡೆದ ಮನೆಯಾಗಿರುವುದಿಲ್ಲ ಅಥವಾ ಪತಿಯಾದ ಅಮಿತ್ ಬಾತ್ರ ಸದಸ್ಯನಾಗಿರುವ ಅವಿಭಕ್ತ ಕುಟುಂಬದ ಸ್ವತ್ತಾಗಿರುವುದಿಲ್ಲ.ಈ ಸ್ವತ್ತು ಅಮಿತ್ ಬಾತನ ತಾಯಿಯಾಗಿರುವ ಹಾಗೂ 2 ನೇ ಅಪೀಲುದಾರಳಿಗೆ ಸಂಪೂರ್ಣವಾಗಿ ಸೇರಿದ ಸ್ವತ್ತಾಗಿರುತ್ತದೆ.ಆದುದರಿಂದ ಅದನ್ನು ಸಾಮೂಹಿಕ ವಾಸದ ಮನೆ ' ಎಂದು ಕರೆಯಲು ಸಾಧ್ಯವಿಲ್ಲ.

17. ಮೇಲೆ ಹೇಳಲಾದ ಇಂದ್ರಶರ್ಮ -ವಿರುದ್ಧ ವಿ.ಕೆ.ವಿ. ಶರ್ಮ ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ಮುಂದೆ ಇದೇ ರೀತಿಯ ವಿವಾದಾಂಶ ಹಲವಾರು ಸಾರಿ ಬಂದಿರುವುದರಿಂದ, ಘನ ಸರ್ವೋಚ್ಚ ನ್ಯಾಯಾಲಯವು, ಅದು, " ಗೃಹ ಸಂಬಂಧೀ ಸಂಬಂಧ " ಎಂಬ ಪದಾವಳಿಯನ್ನು ಹೇಗೆ ಅರ್ಥೈಸಬೇಕೆಂದು ತಿಳಿಸಿದೆ.ಸದರಿ ನಿರ್ಣಯದಲ್ಲಿ, ಪರಿಭಾಷೆಯ ಖಂಡವನ್ನು ಎಂದರೆ ' ಹೀಗೆ ಮತ್ತು ಹೀಗೆ ಎಂದು ಅರ್ಥ ಎಂದು ಪರಿಭಾಷಿಸಿದಾಗ, ಅಂಥ ಪರಿಭಾಷೆಯು ಮೇಲ್ನೋಟಕ್ಕೆ ಶಾಸನ ಗಳ ನಿಯಂತ್ರಿತ ಮತ್ತು ವ್ಯಾಪಕವಾದ ಪರಿಭಾಷೆಯಾಗಿರುತ್ತದೆಂದು ಅಭಿಪ್ರಾಯಪಡಲಾಗಿದೆ.ಗೃಹ ಸಂಬಂಧೀ ಅಧಿನಿಯಮದ 2 (ಎಫ್) ಪ್ರಕರಣದಲ್ಲಿ ಪರಿಭಾಷೆಯನ್ನು ವ್ಯಾಪಕಗೊಳಿಸುವ ಹಾಗೆ " ಒಳಗೊಂಡಿರುತ್ತದೆ ", ಎಂಬ ಪದಾವಳಿಯನ್ನು ಬಳಸಲಾಗಿಲ್ಲ.35 ನೇ ಪ್ಯಾರಾದಲ್ಲಿ ಈ ಕೆಳಗಿನಂತೆ ಅಭಿಪ್ರಾಯ ಪಡಲಾಗಿದೆ:

35. ಪರಿಭಾಷೆಯ ಖಂಡದಲ್ಲಿ ಐದು ಪ್ರವರ್ಗದ ಸಂಬಂಧಗಳನ್ನು ಮಾತ್ರವೇ ನಮೂದಿಸಲಾಗಿದೆ." ಅರ್ಥವೆ ಂ ದರೆ " ಎಂಬ ಪದಾವಳಿಯನ್ನೂ ಬಳಸಿರುವುದರಿಂದ ಅದು ತಾನಾಗಿಯೇ ವ್ಯಾಪಕ ಅರ್ಥ ಪಡೆದುಕೊಳ್ಳುತ್ತದೆ.ಪರಿಭಾಷೆಯ ಖಂಡದಲ್ಲಿ ಎಂದರೆ " ಎಂಬುದಕ್ಕೆ ಹೀಗೆ ಮತ್ತು ಹೀಗೆ ಎಂದು ಪರಿಭಾಷಿಸಿದಾಗ ಮೇಲ್ನೋಟದಲ್ಲಿ ಪರಿಭಾಷೆಯು ನಿಯಂತ್ರಿತವಾಗಿಯೂ ಮತ್ತು ವ್ಯಾಪಕವಾಗಿಯೂ ಇರುತ್ತದೆ.2 (ಎಫ್) ಪ್ರಕರಣದಲ್ಲಿ ಅ " ಒಳಗೊಂಡಿರುತ್ತದೆ " ಎಂಬ ಪರಿಭಾಷೆಯನ್ನು ವ್ಯಾಪಕಗೊಳಿಸುವ ಹಾಗೆ ಬಳಸಲಾಗಿದೆ.ಈ ಸಂದರ್ಭದ ಹಿನ್ನೆಲೆಯಲ್ಲಿ 66 ವಿವಾಹ ಸ್ವರೂಪದಲ್ಲಿನ ಸಂಬಂಧ " ಪದಾವಳಿಯ ಅರ್ಥವನ್ನು ನಾವು ಪರಿಶೀಲಿಸಬೇಕಿದೆ.

18. ಅಸ ಂ ಗತತೆಗೆ ಕಾರಣವಾಗುವ ಯಾವುದೇ ಪರಿಭಾಷೆಯನ್ನು ಅಂಗೀಕರಿಸಬಾರದೆಂಬುದು ಕಾನೂನಿನ ಸುಸ್ಥಾಪಿತ ಪೂರ್ವಭಾವನೆಯಾಗಿದೆ. ಮೇಲೆ ಹೇಳಲಾದ ಎಸ್.ಆರ್. ಬಾತ್ರ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿನ ನಿರ್ಣಯವನ್ನು ಅಧಾರವಾಗಿಟ್ಟುಕೊಂಡು, ದೆಹಲಿ ಉಚ್ಚ ನ್ಯಾಯಾಲಯವು ಸುನೀತ ಗಂಗ್ವಾಲ್ -ವಿರುದ್ಧ-ಚೋಟೆಲಾಲ್ ಮೊಕದ್ದಮೆಯಲ್ಲಿ ಸದರಿ ತತ್ವವನ್ನು ಒತ್ತಿ ಹೇಳಿದೆ.ಸದರಿ ನಿರ್ಣಯದ 7(ii) ಪ್ಯಾರಾದಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಡಲಾಗಿದೆ:

7(ii) ಎಸ್.ಆರ್. ಬಾತ್ರ ಮೊಕದ್ದಮೆಯಲ್ಲಿ (ಮೇಲೆ ಉಲ್ಲೇಖಿಸಿದ) ಸರ್ವೋಚ್ಚ ನ್ಯಾಯಾಲಯದ ಸುಸಂಬದ್ಧ ಅಭಿಪ್ರಾಯವು 21 ರಿಂದ 30 ನೇ ಪ್ಯಾರಾಗಳಲ್ಲಿದ್ದು, ಈ ಪ್ಯಾರಾಗಳನ್ನು ಈ ಕೆಳಗಿನಂತೆ ಓದಲಾಗಿದೆ:

"21. ವಾಸ್ತವವಾಗಿ, ಶ್ರೀಮತಿ ತರುಣ ಬಾತ್ರ ಪ್ರಶ್ನಿತ ನಿವಾಸದಲ್ಲಿ ವಾಸವಾಗಿರಲಿಲ್ಲ ಎಂಬ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ನೀಡಿದ ನಿರ್ಣಯವು ನಿರ್ಣಾಯಕ ಸಂಗತಿಯಾಗಿದ್ದು, ಸಂವಿಧಾನದ 226 ಅನುಚ್ಛೇದದ ಅಡಿಯಲ್ಲಾಗಲೀ ಅಥವಾ 227 ನೇ ಅನುಚ್ಛೇದದ ಅಡಿಯಲ್ಲಾಗಲೀ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ ಎಂಬುದನ್ನು ಗಮನಿಸಬಹುದು.ಆದುದರಿಂದ ಶ್ರೀಮತಿ ತರುಣಬಾತ್ರ, ಅಪೀಲುದಾರರು ಸದರಿ ಸ್ವತ್ತಿನ ಸಂಪೂರ್ಣ ಸ್ವಾಧೀನತೆಯನ್ನು ಹೊಂದಿರಲೇ ಇಲ್ಲ. ಆದುದರಿಂದ ಸ್ವಾಧೀನತೆ ತಪ್ಪಿಸುವ ಪ್ರಶ್ನೆಯೇ ಇಲ್ಲಿ ಉದ್ಭವವಾಗುವುದಿಲ್ಲ ಎಂಬ ಸರಳ ಕಾರಣಕ್ಕಾಗಿ ಪ್ರಶ್ನಿತ ಸ್ವತ್ತಿನಿಂದ ಅಪೀಲುದಾರರ ಸ್ವಾಧೀನತೆಯನ್ನು ತಪ್ಪಿಸುವುದರಿಂದ ಅವಳನ್ನು ನಿರ್ಬಂಧಿಸುವ ಯಾವುದೇ ನಿರ್ಬಂಧಕಾಜ್ಞೆಯನ್ನು ಕ್ಷೇಮು ಮಾಡಲಾಗುವುದಿಲ್ಲ.

14, 2018 ಎಸ್ಸಿ ಆನ್ಲೈನ್ ದೆಹಲಿ 6708

22. ಮೇಲಿನ ವಿಷಯವಲ್ಲದೆ, ನಮ್ಮ ಅಭಿಪ್ರಾಯದಲ್ಲಿ, ಗೃಹ ಸಂಬಂಧೀ ಹಿಂಸೆಯಿಂದ ಮಹಿಳೆಯರ ರಕ್ಷಣೆ, ಅಧಿನಿಯಮ, 2005 ರ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ಅಧಿನಿಯಮವೆಂದು ಉಲ್ಲೇಖಿಸುವುದು) 2 (ಎಸ್) ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸದರಿ ಮನೆಯನ್ನು ಸಾಮೂಹಿಕ ವಾಸದ ಮನೆ ಎಂದು ಹೇಳಲಾಗುವುದಿಲ್ಲ.

" 2 (ಎಸ್) ಸಾಮೂಹಿಕ C ಕುಟುಂಬ ವಾಸದ ಮನೆ " ಎಂದರೆ, ಬಾಧಿತ ವ್ಯಕ್ತಿಯು ಒಂಟಿಯಾಗಿ ಆಗಲಿ ಅಥವಾ ಎದುರುದಾರನ ಜೊತೆಯಲ್ಲಿ ಆಗಲಿ ಗೃಹ ಸಂಬಂಧದಲ್ಲಿ ವಾಸಿಸುತ್ತಿರುವ ಅಥವಾ ಯಾವುದೇ ಕಾಲದಲ್ಲಿ ವಾಸಿಸುತ್ತಿದ್ದ ಮನೆ ಎಂದು ಅರ್ಥ ಮತ್ತು ಬಾಧಿತ ವ್ಯಕ್ತಿಯು ಅಥವಾ ಎದುರುದಾರನು ಜಂಟಿಯಾಗಿ ಒಡೆತನ ಹೊಂದಿರುವ ಅಥವಾ ಬಾಡಿಗೆಗೆ ಪಡೆದಿರುವ ಅಥವಾ ಅವರಿಬ್ಬರಲ್ಲಿ ಒಬ್ಬರು ಒಡೆತನ ಹೊಂದಿರುವ ಅಥವಾ ಬಾಡಿಗೆಗೆ ಪಡೆದಿರುವ ಅದಕ್ಕೆ ಸಂಬಂಧಿಸಿದಂತೆ ಬಾಧಿತ ವ್ಯಕ್ತಿಯು ಅಥವಾ ಎದುರುದಾರನು ಅಥವಾ ಅವರಿಬ್ಬರೂ ಜಂಟಿಯಾಗಿ ಅಥವಾ ಒಂಟಿಯಾಗಿ ಯಾವುದೇ ಹಕ್ಕನ್ನು, ಸ್ವಾಮ್ಯವನ್ನು, ಹಿತಾಸಕ್ತಿಯನ್ನು ಅಥವಾ ಈಕ್ವಿಟಿಯನ್ನು ಹೊಂದಿರುವಂಥ ವಾಸದ ಮನೆಯನ್ನು ಒಳಗೊಳ್ಳುತ್ತದೆ ಮತ್ತು ವಾಸದ ಮನೆಯಲ್ಲಿ ಎದುರುದಾರನು ಅಥವಾ ಬಾಧಿತ ವ್ಯಕ್ತಿಯು ಯಾವುದೇ ಹಕ್ಕನ್ನು, ಸ್ವಾಮ್ಯವನ್ನು ಅಥವಾ ಹಿತಾಸಕ್ತಿಯನ್ನು ಹೊಂದಿರಲಿ ಅಥವಾ ಇಲ್ಲದಿರಲಿ ಎದುರುದಾರನು ಸದಸ್ಯನಾಗಿರುವ ಅವಿಭಕ್ತ ಕುಟುಂಬಕ್ಕೆ ಸೇರಿರಬಹುದಾದಂಥ ವಾಸದ ಮನೆಯನ್ನು ಒಳಗೊಳ್ಳುತ್ತದೆ.

23. ಪ್ರತ್ಯರ್ಜಿದಾರರಾದ ಶ್ರೀಮತಿ ತರುಣ ಬಾತ್ರ ಅವರ ಪರವಾಗಿ ಮಾನ್ಯ ನ್ಯಾಯವಾದಿಗಳು ಮೇಲೆ ಹೇಳಲಾದ ಅಧಿನಿಯಮದ 17 ಮತ್ತು 19 ( 1) ಪ್ರಕರಣವನ್ನು ಆಧಾರವಾಗಿ ನೀಡಿರುವರು.ಅದು ಈ ಕೆಳಗಿನಂತಿದೆ:

17. ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ವಾಸಿಸಲು ಹಕ್ಕು.- ( 1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಗೃಹ ಸಂಬಂಧದಲ್ಲಿರುವ ಪ್ರತಿಯೊಬ್ಬ ಮಹಿಳೆಯು, ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಅವಳಿಗೆ ಯಾವುದೇ ಹಕ್ಕು, ಸ್ವಾಮ್ಯ, ಪ್ರಯೋಜನಕಾರಿ ಹಿತಾಸಕ್ತ ಇರಲಿ ಅಥವಾ ಇಲ್ಲದಿರಲಿ, ಅಲ್ಲಿ ವಾಸಿಸಲು ಹಕ್ಕನ್ನು ಹೊಂದಿರತಕ್ಕದ್ದು.

(2) ಕಾನೂನಿನ ಮೂಲಕ ಸ್ಥಾಪಿತವಾದ ಪ್ರಕ್ರಿಯೆಗನುಸಾರವಾಗಿ ಹೊರತು, ಎದುರುದಾರನು, ಬಾಧಿತ ವ್ಯಕ್ತಿಯನ್ನು ಸಾಮೂಹಿಕ ಕುಟುಂಬ ವಾಸದ ಮನೆಯಿಂದ ಅಥವಾ ಅದರ ಯಾವುದೇ ಭಾಗದಿಂದ ಹೊರಹಾಕತಕ್ಕದ್ದಲ್ಲ ಅಥವಾ ಬೇರೆ ಇರಿಸತಕ್ಕದ್ದಲ್ಲ.

XXXX

19 ( 1), 12 ನೇ ಪ್ರಕರಣದ ( 1) ನೇ ಉಪ-ಪ್ರಕರಣದ ಮೇರೆಗಿನ ಅರ್ಜಿಯನ್ನು ವಿಲೆ ಮಾಡುವಾಗ, ಮ್ಯಾಜಿಸ್ಟ್ರೇಟನು ಗೃಹ ಸಂಬಂಧೀ ಹಿ ಂ ಸೆ ನಡೆದಿದೆಯೆಂದು ತನಗೆ ಮನವರಿಕೆಯಾದ ಮೇಲೆ,

(ಎ) ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಎದುರುದಾರನು ಕಾನೂನುಬದ್ಧ ಅಥವಾ ನ್ಯಾಯ ಸಮ್ಮತ ಹಿತಾಸಕ್ತಿ ಹೊಂದಿರಲಿ ಅಥವಾ ಇಲ್ಲದಿರಲಿ, ಬಾಧಿತ ವ್ಯಕ್ತಿಯನ್ನು ಸಾಮೂಹಿಕ ಕುಟುಂಬ ವಾಸದ ಮನೆಯ ಸ್ವಾಧೀನ ತಪ್ಪಿಸುವುದರಿಂದ ಅಥವಾ ಯಾವುದೇ ಇತರ ರೀತಿಯಲ್ಲಿ ಸ್ವಾಧೀನತೆಗೆ ಭಂಗವನ್ನುಂಟು ಮಾಡುವುದರಿಂದ ಎದುರುದಾರನನ್ನು ಪ್ರತಿಬಂಧಿಸುವ;

(ಬಿ) ಸಾಮೂಹಿಕ ಕುಟುಂಬ ವಾಸದ ಮನೆಯಿಂದ ಆತನೇ ಹೊರ ಹೋಗುವಂತೆ ಎದುರುದಾರನಿಗೆ ನಿರ್ದೇಶಿಸುವ;

(ಸಿ) ಬಾಧಿತ ವ್ಯಕ್ತಿಯು ವಾಸ ಮಾಡುತ್ತಿರುವ ಸಾಮೂಹಿಕ ಕುಟುಂಬ ವಾಸದ ಮನೆಯ ಯಾವುದೇ ಭಾಗಕ್ಕೆ ಪ್ರವೇಶಿಸುವುದರಿಂದ ಎದುರುದಾರನನ್ನು ಮತ್ತು ಅವನ ಯಾರೇ ಸಂಬಂಧಿಕರನ್ನು ಪ್ರತಿಬ ಂ ಧಿಸುವ;

(ಡಿ) ಸಾಮೂಹಿಕ ಕುಟುಂಬ ವಾಸದ ಮನೆಯನ್ನು ಪರಭಾರೆ ಮಾಡುವುದರಿಂದ ಅಥವಾ ವಿಲೆ ಮಾಡುವುದರಿಂದ ಅಥವಾ ಎದುರುದಾರನನ್ನು ಪ್ರತಿಬಂಧಿಸುವ;

(ಇ) ಮ್ಯಾಜಿಸ್ಟ್ರೇಟನ ಅನುಮತಿ ಪಡೆಯದೆ ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಎದುರುದಾರನ ಹಕ್ಕುಗಳನ್ನು ಅವನು ತ್ಯಜಿಸುವುದರಿಂದ ಪ್ರತಿಬಂಧಿಸುವ; ಅಥವಾ

(ಎಫ್) ಸಾಮೂಹಿಕ ಕುಟುಂಬ ವಾಸದ ಮನೆಯಲ್ಲಿ ಬಾಧಿತ ವ್ಯಕ್ತಿಯು ಅನುಭೋಗಿಸಿದಂತಹುದೇ ಮಟ್ಟದ ಪರ್ಯಾಯ ವಸತಿಯನ್ನು ಆಕೆಗೆ ಒದಗಿಸುವುದಕ್ಕೆ ಅಥವಾ ಪರಿಸ್ಥಿತಿಗಳು ಅದನ್ನು ಅಗತ್ಯಪಡಿಸಿದರೆ, ಅದಕ್ಕೆ ಬಾಡಿಗೆಯನ್ನು ಸಂದಾಯ ಮಾಡುವುದಕ್ಕೆ ಎದುರುದಾರನಿಗೆ ನಿರ್ದೇಶಿಸುವ

-ವಾಸದ ಆದೇಶವನ್ನು ಹೊರಡಿಸಬಹುದು:

ಪರಂತು, (ಬಿ) ಖಂಡದ ಮೇರೆಗಿನ ಆದೇಶವನ್ನು ಮಹಿಳೆಯಾಗಿರುವ ಯಾರೇ ವ್ಯಕ್ತಿಯ ವಿರುದ್ಧ ಹೊರಡಿಸತಕ್ಕದ್ದಲ್ಲ.

24. ಪ್ರತ್ಯರ್ಜಿದಾರ ಶ್ರೀಮತಿ ತರುಣ ಬಾತ್ರ ಅವರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಸಾಮೂಹಿಕ ವಾಸದ ಮನೆ ಪರಿಭಾಷೆಯು, ಬಾಧಿತ ವ್ಯಕ್ತಿಯು ವಾಸಿಸುತ್ತಿರುವ ಅಥವಾ ಯಾವುದೇ ಹಂತದಲ್ಲಿ ಗೃಹ ಸಂಬಂಧೀ ಸಂಬಂಧದಲ್ಲಿ ವಾಸವಾಗಿದ್ದ ವಾಸದ ಮನೆಯನ್ನು ಒಳಗೊಳ್ಳುತ್ತದೆ ಎಂದು ಹೇಳಿರುವರು.ಅವರು, ಪ್ರತ್ಯರ್ಜಿದಾರಳು ಪ್ರಶ್ನಿತ ಸ್ವತ್ತಿನಲ್ಲಿ ಈ ಮುಂಚೆ ವಾಸಿಸುತ್ತಿದ್ದರೆಂದು ಒಪ್ಪಿಕೊಂಡಿರುವುದರಿಂದ, ಸದರಿ ಸ್ವತ್ತು ಅವಳ ಸಾಮೂಹಿಕ ವಾಸದ ಮನೆಯಾಗಿರುತ್ತದೆ ಎಂಬುದು ಅವರ ವಾದವಾಗಿದೆ.

25. ಈ ನಿವೇದನೆಯನ್ನು ನಾವು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

26. ಮೇಲೆ ಹೇಳಲಾದ ನಿವೇದನೆಯನ್ನು ಅಂಗೀಕರಿಸಿದ ಪಕ್ಷದಲ್ಲಿ, ಪತಿ-ಪತ್ನಿ ಜೊತೆಯಲ್ಲಿ ಈ ಹಿಂದೆ ವಾಸಿಸಿದಾಗಲೆಲ್ಲಾ ಆ ಸ್ವತ್ತು ಅ ಸಾಮೂಹಿಕ ವಾಸದ ಮನೆಯಾಗುತ್ತದೆ ಎಂಬ ಅರ್ಥವು ಬರುತ್ತದೆ.ಪತಿ ಮತ್ತು ಪತ್ನಿಯರಿಬ್ಬರೂ ಒಟ್ಟಿಗೆ ಡಜನ್ಗಟ್ಟಲೆ ಮನೆಗಳಲ್ಲಿ ಎಂದರೆ ಪತ್ನಿಯು ಪತಿಯ ತಂದೆ ಮನೆಯಲ್ಲಿ, ಪತಿಯ ಪಿತೃವಿನ ಅಜ್ಜಿ-ಅಜ್ಜನ ಮನೆ, ಪತಿಯ ಮಾತೃವಿನ ಅಜ್ಜ-ಅಜ್ಜಿ ಮನೆಯಲ್ಲಿ, ಪತಿಯ ಚಿಕ್ಕಪ್ಪಂದಿರ, ಚಿಕ್ಕಮ್ಮಂದಿರ, ಸಹೋದರ, ಸಹೋದರಿ, ಸೋದರಳಿಯ, ಸೋದರತ್ತೆಯ ಮನೆಗಳಲ್ಲಿ ವಾಸವಾಗಿರುವ ಸಾಧ್ಯತೆ ಸಹಜವಾಗಿರುತ್ತದೆ.ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ವ್ಯಾಖ್ಯಾನಿಸಿದ ಪರಿಭಾಷೆಯನ್ನು ಅಂಗೀಕರಿಸಿದರೆ, ಆಗ ಪತಿಯ ಸಂಬಂಧಿಗಳೆಲ್ಲರ ಮನೆಗಳು ಸಾಮೂಹಿಕ ವಾಸದ ಮನೆಗಳಾಗುತ್ತವೆ ಮತ್ತು ಪತ್ನಿಯು ತನ್ನ ಪತಿಯ ಸಂಬಂಧಿಗಳೆಲ್ಲರ ಮನೆಯಲ್ಲಿ ಈ ಹಿಂದೆ ಕೆಲ ಸಮಯ ಪತಿಯೊಂದಿಗೆ ವಾಸವಾಗಿದ್ದ

ಎಂಬ ಕಾರಣದ ಮೇಲೆ ಅವಳ ಪತಿಯ ಸಂಬಂಧಿಕರ ಈ ಎಲ್ಲ ಮನೆಗಳಲ್ಲಿ ವಾಸಿಸುವಲ್ಲಿ ಅವಳನ್ನು ಸಮರ್ಥಿಸಬಹುದು.ಅಂಥ ಅಭಿಪ್ರಾಯವು ಗೊಂದಲಗಳಿಗೆ ಅವಕಾಶವಾಗುವುದಲ್ಲದೆ, ಅಸಂಬದ್ಧವಾಗಿರುತ್ತದೆ.

27. ಅಸಂಬದ್ಧತೆಗೆ ಅವಕಾಶ ಮಾಡಿಕೊಡುವ ಯಾವುದೇ ಪರಿಭಾಷೆಯನ್ನು ಅಂಗೀಕರಿಸಬಾರದೆಂಬುದು ಸುಸ್ಥಾಪಿತ ನಿಯಮ.

28. ಪ್ರತ್ಯರ್ಜಿದಾರ ಶ್ರೀಮತಿ ತರುಣ ಬಾತರ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಗಳು ಅಧಿನಿಯಮದ 19 (1) (ಎಫ್) ಪ್ರಕರಣವನ್ನು ಆಧಾರವಾಗಿಟ್ಟುಕೊಂಡು, ಅವಳಿಗೆ ಪರ್ಯಾಯ ವಸತಿಯನ್ನು ಕಲ್ಪಿಸಿಕೊಡಬೇಕೆಂದು ನಿವೇದಿಸಿರುವರು.ನಮ್ಮ ಅಭಿಪ್ರಾಯದಲ್ಲಿ, ಪತಿಯ ವಿರುದ್ಧ ಮಾತ್ರವೇ ಪರ್ಯಾಯ ವಸತಿಗಾಗಿ ಕ್ಲೇಮು ಮಾಡಬಹುದೇ ಹೊರತು, ಪತಿಯ ತಾಯಿಯ (ಅತ್ತೆಯ ಮನೆಯನ್ನು) ಅಥವಾ ಇತರ ಸಂಬಂಧಿಗಳ ವಿರುದ್ಧ ವಸತಿಗಾಗಿ ಅಲ್ಲ.

29. ಅಧಿನಿಯಮದ 17 (1) ನೇ ಪ್ರಕರಣಕ್ಕೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಲ್ಲಿ, ಪತ್ನಿಯು ಸಾಮೂಹಿಕ ವಾಸದ ಮನೆಯಲ್ಲಿ ವಾಸಿಸುವುದಕ್ಕೆ ಮಾತ್ರವೇ ಕ್ಲೇಮು ಮಾಡುವ ಹಕ್ಕನ್ನು ಹೊಂದಿರುತ್ತಾಳೆ ಮತ್ತು ಸಾಮೂಹಿಕ ವಾಸದ ಮನೆ " ಎಂದರೆ ಪತಿಗೆ ಸೇರಿದ ಮನೆ ಅಥವಾ ಪತಿಯಿ 0 ದ ಬಾಡಿಗೆಗೆ ತೆಗೆದುಕೊ ಂ ಡಿರುವ ಮನೆಯಾಗಿರುತ್ತದೆ ಅಥವಾ ಪತಿ ಸದಸ್ಯನಾಗಿರುವ ಅವಿಭಕ್ತ ಕುಟುಂಬಕ್ಕೆ ಸೇರಿದ ಮನೆ. ಪ್ರಸ್ತುತ ಮೊಕದ್ದಮೆಯಲ್ಲಿ ಪ್ರಶ್ನಿತ ಸ್ವತ್ತು ಅಮಿತ್ ಬಾತ್ರಗೆ ಸೇರಿದ ಸ್ವತ್ತಾಗಿರುವುದಿಲ್ಲ.ಅಥವಾ ಅವನು ಬಾಡಿಗೆಗೆ ತೆಗೆದುಕೊಂಡ ಮನೆಯಾಗಿರುವುದಿಲ್ಲ ಹಾಗೂ ಪತಿ ಅಮಿತ್ ಬಾತ್ರ ಸದಸ್ಯನಾಗಿರುವ ಅವಿಭಕ್ತ ಕುಟುಂಬದ ಸ್ವತ್ತು ಆಗಿರುವುದಿಲ್ಲ.ಬದಲಾಗಿ ಸದರಿ ಸ್ವತ್ತು ಅಮಿತ್ ಬಾತನ ತಾಯಿಯಾದ 2 ನೇ ಅಪೀಲುದಾರರಿಗೆ ಸಂಪೂರ್ಣವಾಗಿ ಸೇರಿದ ಸ್ವತ್ತಾಗಿದೆ.ಆದುದರಿಂದ ಅದನ್ನು ಸಾಮೂಹಿಕ ವಾಸದ ಮನೆ " ಎಂದು ಕರೆಯಲು ಸಾಧ್ಯವಿಲ್ಲ.

30. ನಿಸ್ಸಂಶಯವಾಗಿ, ಅಧಿನಿಯಮದ 2 (ಎಸ್) ಪ್ರಕರಣದಲ್ಲಿ " ಸಾಮೂಹಿಕ ವಾಸದ ಮನೆ " ಯ ಪರಿಭಾಷೆಯನ್ನು ತುಂಬಾ ಸ ಂ ತೋಷದಾಯಕವಾಗಿ ಪರಿಭಾಷಿಸಿರುವುದಿಲ್ಲ ಅಲ್ಲದೆ, ಸೂಕ್ಷ್ಮತೆಯಿಲ್ಲದೆ ಬರೆದಿರುವಂತೆ ತೋರುತ್ತದೆ.ಆದರೆ, ನಾವು ತು ಂ ಬಾ ಸ ಂ ವೇದನಾಶೀಲವಾದ ಹಾಗೂ ಸಮಾಜದಲ್ಲಿ ಗೊಂದಲಗಳಿಗೆ ಅವಕಾಶ ಮಾಡಿಕೊಡದಂತಹ ಪರಿಭಾಷೆಯನ್ನು ನಾವು ನೀಡಬೇಕಾಗುತ್ತದೆ.

19. ಮೇಲಿನ ಸದರಿ ಚರ್ಚೆಯಲ್ಲಿ ಮಂಡಿಸಲಾದ ಅಂಶಗಳೆಲ್ಲವನ್ನು ಗಮನದಲ್ಲಿಟ್ಟುಕೊಂಡು, ಪ್ರಸ್ತುತ ಮೊಕದ್ದಮೆಯಲ್ಲಿ ಒಪ್ಪಿಕೊಂಡಿರುವಂತೆ ಪ್ರತ್ಯರ್ಜಿದಾರಳಾದ ಮಗಳು ಮನೆಯನ್ನು ಬಿಟ್ಟು ಡಾ || ಝುಬೀರ್ ಖಾನ್ನೊಂದಿಗೆ ವಿವಾಹವಾಗಿರುತ್ತಾಳೆ ಮತ್ತು ಅವಳು ದುಬೈನಲ್ಲಿಯೇ ವಾಸವಾಗಿರುತ್ತಾಳೆ ಮತ್ತು ಅವಳು ಡಾ || ಝುಬೀರ್ ಖಾನ್ ಸಾಂಗತ್ಯವನ್ನು ತೊರೆದು, ಬೆಂಗಳೂರಿಗೆ ಬಂದು ಅರ್ಜಿದಾರರಾದ ಅವಳ ತಾಯಿ ಮತ್ತು ಸಹೋದರನೊಂದಿಗೆ ವಾಸ ಮಾಡಲಾರಂಬಿಸಿದ್ದಳು ಎಂಬುದನ್ನು ತೋರಿಸಲು ಯಾವುದೇ ಸಾಕ್ಷ್ಯ ಎ ಇರುವುದಿಲ್ಲ ಎಂಬುದು ನಮ್ಮ ಪರಿಗಣಿತ ಅಭಿಪ್ರಾಯವಾಗಿದೆ.ಅರ್ಜಿದಾರರ ನಿರ್ದಿಷ್ಟ ವಾದಾಂಶವೇನೆಂದರೆ, ಪ್ರತ್ಯರ್ಜಿದಾರಳು ತನ್ನ ಖಾಯಿಲೆ ಬಿದ್ದ ತಂದೆಯನ್ನು ನೋಡಲು ಮಾತ್ರ ಬಂದಿದ್ದಳು.ಆಗ ಅವಳು ಹೋಟೆಲ್ನಲ್ಲಿ ಉಳಿದುಕೊಂಡಿದ್ದಳು.

ಅವಳ ತಂದೆಯ ಮರಣದ ನಂತರದಲ್ಲಿ ಕೆಲವು ದಿನಗಳ ಕಾಲ ಅರ್ಜಿದಾರರ ಮನೆಯಲ್ಲಿಯೇ ಬಂದು ಉಳಿದು ಕೊಂಡಿದ್ದಳು.ಹಾಗಾಗಿ ಅವಳು ಆ ಮನೆಯ ವಾಸಿಯಲ್ಲ.ಮೇಲೆ ಉಲ್ಲೇಖಿಸಲಾದ ವಿಜಯ ವರ್ಮ ಮೊಕದ್ದಮೆಯಲ್ಲಿ ಅಭಿಪ್ರಾಯಪಡಲಾದಂತೆ, ಕುಟುಂಬ ಸದಸ್ಯರು ತಮ್ಮದೇ ಆದ ವಾಸದ ಮನೆಯನ್ನು ಸುಸ್ಥಾಪಿಸುವುದಕ್ಕೆ ಸಾಮೂಹಿಕ ವಾಸದ ಮನೆಯನ್ನು ಬಿಟ್ಟು ಹೋದರೆ, ಗೃಹ ಸಂಬಂಧೀ ಹಿಂಸೆ ಅಧಿನಿಯಮದ 12 ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವ ಹಕ್ಕನ್ನು ಹೊಂದುವುದಕ್ಕೆ ಅವಳು ಕ್ಲೇಮು ಮಾಡಲು ಸಾಧ್ಯವಿಲ್ಲ.ಸದರಿ ತತ್ವವು ಪ್ರಸ್ತುತ ಮೊಕದ್ದಮೆಗೆ ಯಥಾರ್ಥವಾಗಿ ಅನ್ವಯವಾಗುತ್ತದೆ.ಅವಳು ಸ್ವತ್ತಿನ ಮೇಲೆ ಯಾವುದೇ ಹಕ್ಕನ್ನು ಹೊಂದಿದ್ದೇ ಆದಲ್ಲಿ, ಅವಳು ಸ್ವತ್ತನ್ನು ವಿಭಜನೆ ಮಾಡಿಕೊಳ್ಳುವುದಕ್ಕೆ ದಾವೆಯನ್ನು ದಾಖಲಿಸಬಹುದು.ಈ ಮೊಕದ್ದಮೆಯಲ್ಲಿ ಆ ರೀತಿಯ ನ್ಯಾಯ ನಿರ್ಣಯವನ್ನು ಮಾಡಲು ಸಾಧ್ಯವಾಗುತ್ತಿಲ್ಲ.ವಾದ-ವಿವಾದಗಳ ಸಂದರ್ಭದಲ್ಲಿ, ಈ ನ್ಯಾಯಾಲಯಕ್ಕೆ

ಪ್ರತ್ಯರ್ಜಿದಾರಳು ಈಗಾಗಲೇ ಸ್ವತ್ತಿನ ವಿಭಜನೆಗಾಗಿ ಮೂ.ದಾ.ಸಂ .8796/2018 ರಲ್ಲಿ ದಾವೆಯನ್ನು ಹೂಡಿದ್ದಾಳೆಂಬ ಸಂಗತಿಯನ್ನು ಈ ನ್ಯಾಯಾಲಯದ ಗಮನಕ್ಕೆ ತರಲಾಗಿದೆ.

20. ಅದನ್ನು ಬದಿಗಿಟ್ಟು ನೋಡಿದರೂ ಸಹ, ಅರ್ಜಿದಾರರ ಈ ನಿರ್ದಿಷ್ಟ ಮೊಕದ್ದಮೆಯಲ್ಲಿ, ಸದರಿ ಸ್ವತ್ತು ಮೊದಲ ಅರ್ಜಿದಾರರ ಅಜ್ಜಿಯಾದ ಶ್ರೀಮತಿ ಸಾವಿತ್ರಮ್ಮನವರಿಗೆ ಪ್ರತ್ಯೇಕವಾಗಿ ಸೇರಿದ ಸ್ವತ್ತಾಗಿದ್ದು, ಅದನ್ನು ಎರಡನೇ ಅರ್ಜಿದಾರರಿಗೆ ದಾನ ಪತ್ರದ ಮೂಲಕ ನೋಂದಣಿ ಮಾಡಿಕೊಡಲಾಗಿದೆ ಇಂತಹ ಸಂದರ್ಭದಲ್ಲಿ, ಸದರಿ ಸ್ವತ್ತು ಅವಿಭಕ್ತ ಕುಟುಂಬದ ಸ್ವತ್ತು ಅಲ್ಲ ಅಥವಾ ಈ ಸ್ವತ್ತು ಶ್ರೀಮತಿ ಸಾವಿತ್ರಮ್ಮ ಅವರ ಪತಿಯೂ ಸಂಪಾದಿಸಿದ ಸ್ವತ್ತೂ ಆಗಿರುವುದಿಲ್ಲ.ಇಂತಹ ಸನ್ನಿವೇಶದಲ್ಲಿ ಪ್ರತ್ಯರ್ಜಿದಾರಳು ಸಾಮೂಹಿಕ ವಾಸದ ಮನೆಗೆ ಹಕ್ಕುಳ್ಳವಳಾಗಿರುವುದಿಲ್ಲ ಮತ್ತು ಗೃಹ ಸಂಬಂಧಿ ಹಿಂಸೆ ಅಧಿನಿಯಮದ 12 ನೇ ಪ್ರಕರಣದ ಅಡಿಯಲ್ಲಿ ಅವಳು ಅರ್ಜಿಯನ್ನು ದಾಖಲಿಸುವುದಕ್ಕೆ ಹಕ್ಕನ್ನು ಹೊಂದಿರುವುದಿಲ್ಲ.

21. ಮೊಕದ್ದಮೆಯ ಮೇಲಿನ ವಾಸ್ತವಿಕ ಅಂಶಗಳನ್ನು ಮತ್ತು ಮೇಲಿನ ನಿರ್ಣಯಗಳಲ್ಲಿ ಮಂಡಿಸಲಾದ ಪ್ರಮಾಣಬದ್ದತಾ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಪರಿಶೀಲಿಸಿದಾಗ, ಯಾವುದೇ ಸದ್ಭಾವನೆಯ ಕಾರಣದ ಮೇಲೆ ಗೃಹ ಸಂಬಂಧೀ ಹಿಂಸೆ ಅಧಿನಿಯಮದಲ್ಲಿ ಹೇಳಲಾದ ಯಾವುದೇ ಪರಿಹಾರೋಪಾಯ ಪಡೆಯುವುದಕ್ಕೆ ಸಂಬಂಧಿಸಿದಂತೆ ಪ್ರತ್ಯರ್ಜಿದಾರಳಿಗೆ ಯಾವುದೇ ಯುಕ್ತ ಆಧಾರಗಳು ಇರುವುದಿಲ್ಲವೆಂಬುದು ನನ್ನ ಪರಿಗಣಿತ ಅಭಿಪ್ರಾಯವಾಗಿದೆ.

22. ಅಧಿವಿಚಾರಣಾ ನ್ಯಾಯಾಲಯದ ಆದೇಶ ಮತ್ತು ತೀರ್ಪನ್ನು ತುಂಬಾ ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಅವಲೋಕಿಸಿದ್ದೇವೆ.ಈ ನ್ಯಾಯಾಲಯಗಳೆರಡೂ ಸದರಿ ಸಂಗತಿಗಳನ್ನು ಸರಿಯಾಗಿ ಪರಿಗಣಿಸದೆ, ಅರ್ಜಿಯು ಸಮರ್ಥನೀಯವಾಗಿದೆ ಎಂಬ ತಪ್ಪು ನಿರ್ಣಯಕ್ಕೆ ಬಂದಿರುತ್ತವೆ.

23. ಮೊಕದ್ದಮೆಯ ಮೇಲಿನ ಸದರಿ ವಾಸ್ತವಿಕ ಅಂಶಗಳೆಲ್ಲವನ್ನು ಪರಿಗಣನೆಗೆ ತೆಗೆದುಕೊಂಡು ಅರ್ಜಿಯನ್ನು ಪುರಸ್ಕರಿಸಲಾಗಿದೆ ಮತ್ತುದಿನಾಂಕ: 19.08.2019 ರ ಕ್ರಿಮಿನಲ್ ಅಪೀಲುಸಂಖ್ಯೆ: 615/2019 ರಲ್ಲಿ LX ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶ, ಬೆಂಗಳೂರು ಇವರು ಹೊರಡಿಸಿದ ಪ್ರಶ್ನೆತ ಆದೇಶವನ್ನು ವಜಾಗೊಳಿಸಲಾಗಿದೆ ಮತ್ತು ಪ್ರತ್ಯರ್ಜಿದಾರರು ಗೃಹ ಸಂಬಂಧೀ ಹಿಂಸೆ ಅಧಿನಿಯಮದ 0 ಅಡಿಯಲ್ಲಿ ದಾಖಲಿಸಿದ ಅರ್ಜಿಯೂ ಊರ್ಜಿತವಾಗಿಲ್ಲವೆಂದು ನಿರ್ಣಯಿಸಲಾಗಿದೆ.

ಮುಖ್ಯ ಅರ್ಜಿಯನ್ನು ವಿಲೇ ಮಾಡುವ ಹಿನ್ನೆಲೆಯಲ್ಲಿ, ಐ.ಎ.ಸಂಖ್ಯೆ: 2/2019 ಪರಿಗಣನೆಗೆ ಊರ್ಜಿತವಾಗುವುದಿಲ್ಲ ಮತ್ತು ಅದನ್ನು ತದನುಸಾರವಾಗಿ ವಿಲೇ ಮಾಡಲಾಗಿದೆ.